ವಿಜಯಪುರ | ಸಂಪುಟ 01 | ಸಂಚಿಕೆ 265 | ಪುಟ 4 | ₹ 3.00

https://udayarashminews.com

udayarashmi 7026028778

# ಉದಯ ರಶ್ಮಿ

ಜನಪರ-ಜೀವಪರ

ಸಂಪಾದಕ : ಇಂದುಶೇಖರ ಮಣೂರ


ಕನ್ನಡ ದಿನಪತ್ರಿಕೆ

editor.udayarashmi@gmail.com | Title Code: KARKAN28047 | ಶುಕ್ರವಾರ ಡಿಸೆಂಬರ್ 15, 2023

"ಚೈನಾ ದೇಶದಲ್ಲಿಯೂ ಕೂಡಾ ಸಂಸ್ಕೃತ ಬಳಕೆಯಲ್ಲಿ ಇದೆ ಎಂದರೆ ಅದು ಭಾರತದ ಹೆಮ್ಮೆಯ ಸಂಗತಿ. ಆದರೆ ನಮ್ಮ ಸಂಸ್ಕೃತ ಭಾಷೆಯನ್ನು ನಾವೇ ಅದನ್ನು ಪ್ರಚಾರ, ಪ್ರಸಾರ ಮಾಡದೆ ದೂರ ಮಾಡಿದ್ದೇವೆ ಎಂಬುದೇ ವಿಷಾದನೀಯ."

– ಅರುಣ ಶಹಾಪೂರ

ಮಾಜಿ ವಿಧಾನ ಪರಿಷತ್ ಸದಸ್ಯರು



ಕಾಂಗ್ರೆಸ್ ಸರ್ಕಾರದ ಐದನೇ ಗ್ಯಾರಂಟಿ | ಪದವೀಧರರಿಗೆ ಮಾಸಿಕ 3,000 ರೂ & ಡಿಪ್ಲೊಮಾ ನಿರುದ್ಯೋಗಿಗಳಿಗೆ ರೂ.1,500 ಭತ್ಯೆ

# 'ಯುವ ನಿಧಿ' ಯೋಜನೆ ಜ.1ರಿಂದ ಜಾರಿ

ಬೆಂಗಳೂರು: ಪದವೀಧರರಿಗೆ 3 ಸಾವಿರ ರೂ. ಮತ್ತು ಡಿಪ್ಲೊಮಾ ಮಾಡಿದ ನಿರುದ್ಯೋಗಿ ಯುವಕ–ರಿಗೆ ಪ್ರತಿ ತಿಂಗಳು ರೂ.1500 ಭತ್ಯೆ ನೀಡುವ ರಾಜ್ಯ ಕಾಂಗ್ರೆಸ್ ಸರ್ಕಾರದ ಐದನೇ ಗ್ಯಾರಂಟಿ 'ಯುವ ನಿಧಿ' ಯೋಜನೆ ಹೊಸ ವರ್ಷದಿಂದಲೇ ಜಾರಿಗೆ ಬರಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ಘೋಷಿಸಿದ್ದಾರೆ.

ಈ ಮುಂಚೆ ಡಿಸೆಂಬರ್ 26 ರಿಂದ 'ಯುವ ನಿಧಿ' ನೋಂದಣಿ ಪ್ರಾರಂಭವಾಗಲಿದೆ ಎಂದು ಕೌಶಲ್ಯಾಭಿವೃದ್ಧಿ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಅವರು ಹೇಳಿದ್ದರು.



ಇದೀಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಈ ಯೋಜನೆಯು ಜನವರಿ 1, 2024 ರಿಂದ ಜಾರಿಗೆ ಬರಲಿದೆ ಮತ್ತು ಅರ್ಜಿದಾರರು 'ಸೇವಾ ಸಿಂಧು' ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬಹುದು ಎಂದು ತಿಳಿಸಿದ್ದಾರೆ.

2022–23ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಪದವಿ ಪಡೆದು ಆರು ತಿಂಗಳು ಪೂರೈಸಿದವರು ಮತ್ತು ಉನ್ನತ ಶಿಕ್ಷಣ ಅಥವಾ ಯಾವುದೇ ಉದ್ಯೋಗಕ್ಕೆ ಸೇರದೇ ಇರುವವರು ಅರ್ಜಿ ಸಲ್ಲಿಸಲು ಅರ್ಹರು ಎಂದು ಮುಖ್ಯಮಂತ್ರಿಗಳು ಸಾಮಾಜಿಕ ಮಾಧ್ಯಮ 'ಎಕ್ಸ್' ನಲ್ಲಿ ಪೋಸ್ಟ್ ಮಾಡಿದ್ದಾರೆ.

ಈ ಯೋಜನೆಯಡಿ ನಿರುದ್ಯೋಗಿ ಪದವೀಧರರಿಗೆ ಮಾಸಿಕ 3,000 ರೂ. ಮತ್ತು ಡಿಪ್ಲೊಮಾ ಮಾಡಿದ ನಿರುದ್ಯೋಗಿಗಳಿಗೆ 1,500 ರೂ. ನೀಡಲಾಗುತ್ತದೆ. ಉದ್ಯೋಗ ಸಿಗುವವರೆಗೆ ಅಥವಾ ಎರಡು ವರ್ಷ ಅವಧಿಯಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಈ ಹಣವನ್ನು ಫಲಾನುಭವಿಗಳ ಖಾತೆಗೆ ನೇರವಾಗಿ ವರ್ಗಾಯಿಸಲಾಗುತ್ತದೆ.




ಈ ವರ್ಷದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಐದು ಗ್ಯಾರಂಟಿಗಳನ್ನು ಘೋಷಿಸಿತ್ತು ಮತ್ತು ಅದರಲ್ಲಿ 'ಯುವ ನಿಧಿ' ಕೂಡ ಒಂದಾಗಿದೆ.

ಲೋಕಸಭಾ ಭದ್ರತಾ ಲೋಪ ಪ್ರಕರಣದ ಆರೋಪಿಗಳಿಗೆ ಪಾಸ್ ನೀಡಿದ ಹಿನ್ನೆಲೆ

# ಸಂಸದ ಪ್ರತಾಪಸಿಂಹ ಅಮಾನತಿಗೆ ಕಾಂಗ್ರೆಸ್ ಆಗ್ರಹ

ಬೆಂಗಳೂರು: ಬುಧವಾರ ಲೋಕಸಭೆಯೊಳಗೆ ನುಗ್ಗಿ ದಾಂಧಲೆ ಎಬ್ಬಿಸಿದ್ದ ಇಬ್ಬರು ವ್ಯಕ್ತಿಗಳಿಗೆ ಪಾಸ್ ನೀಡಿದ್ದ ಬಿಜೆಪಿ ಮೈಸೂರು ಸಂಸದ ಪ್ರತಾಪ್ ಸಿಂಹ ಅವರನ್ನು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು ಅಮಾನತುಗೊಳಿಸಬೇಕು ಎಂದು ಕರ್ನಾಟಕದ ಹಲವು ಸಚಿವರು ಗುರುವಾರ ಒತ್ತಾಯಿಸಿದ್ದಾರೆ.

ಲೋಕಸಭೆಯ ಸಂದರ್ಶಕರ ಗ್ಯಾಲರಿಯಿಂದ ಜಿಗಿದ ಇಬ್ಬರು ವ್ಯಕ್ತಿಗಳಾದ ಮನೋರಂಜನ್ ಡಿ ಮತ್ತು ಸಾಗರ್ ಶರ್ಮಾ ದೆಹಲಿ ಪೊಲೀಸರ ವಶದಲ್ಲಿದ್ದು, ಅವರ ವಿಚಾರಣೆ ನಡೆಯುತ್ತಿದೆ. ಗ್ಯಾಲ–ರಿಯಿಂದ ಜಿಗಿದ ನಂತರ ಇಬ್ಬರು ಯುವಕರು ಲೋಕಸಭೆಯೊಳಗೆ ಹಳದಿ ಅನಿಲದ ಡಬ್ಬಿಗಳನ್ನು ತೆರೆದು ಹೊಗೆ ಎಬ್ಬಿಸಿದ್ದರು. ಲೋಕಸಭೆ ಸಂಸದರು ಅವರನ್ನು ಹಿಡಿದು ಭದ್ರತಾ ಸಿಬ್ಬಂದಿಗೆ ಒಪ್ಪಿಸಿದ್ದರು.

ಮೈಸೂರಿನ ಲೋಕಸಭಾ ಸಂಸದ ಪ್ರತಾಪಸಿಂಹ ಬಂಧಿತ–ರಿಬ್ಬರಿಗೆ ಪಾಸ್‌ಗಳನ್ನು ನೀಡಿರುವುದು ತನಿಖೆಯ ವೇಳೆ ಪತ್ತೆಯಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಕಾಂಗ್ರೆಸ್ ನಾಯಕರು ಗುರುವಾರ ಪ್ರತಾಪ್ ಸಿಂಹ ಅವರನ್ನು ಲೋಕಸಭೆಯಿಂದ ಅಮಾನತುಗೊಳಿಸುವಂತೆ ಒತ್ತಾಯಿಸಿದರು. ಘಟನೆ ನಡೆದ ಬುಧವಾರವೂ ಮೈಸೂರಿನ ಸಂಸದರ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಗಿತ್ತು.



ಲೋಕಸಭೆಯಲ್ಲಿ ನಡೆದ ಘಟನೆಯನ್ನು ನಾನು ಖಂಡಿಸುತ್ತೇನೆ. ಆದರೆ, ಇದಕ್ಕೆ ಯಾರು ಹೊಣೆ? ಒಂದು ವೇಳೆ ಕಾಂಗ್ರೆಸ್ ಸಂಸದರು ಪಾಸ್‌ಗಳನ್ನು ನೀಡಿದ್ದರೆ ಬಿಜೆಪಿಯವರು ನಮಗೆ ದೇಶವಿರೋಧಿ ಟ್ಯಾಗ್ ನೀಡಿ ರಾತ್ರೋರಾತ್ರಿ ನಮ್ಮನ್ನು ಗಲ್ಲಿಗೇರಿಸುತ್ತಿದ್ದರು. ಪಾಸ್ ನೀಡಿದವರನ್ನು ಏಕೆ ವಿಚಾರಣೆಗೆ ಕರೆದಿಲ್ಲ? ಪ್ರತಾಪಸಿಂಹ ಮುಂದೆ ಬಂದು ಹೇಳಿಕೆ ನೀಡಬೇಕು. ಜೇಮ್ಸ್ ಬಾಂಡ್, ರಾಷ್ಟ್ರೀಯ ಭದ್ರತೆ ಎಂದು ಕರೆಯಲ್ಪಡುವ ಅಜಿತ್ ದೋವಲ್ ಏಕೆ ಸುಮ್ಮನಿದ್ದಾರೆ? ಭದ್ರತಾ ಲೋಪಗಳಿಗೆ ಅವರು ಉತ್ತರ ನೀಡಬೇಕು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಕರ್ನಾಟಕದ ಗೃಹ ಸಚಿವ ಡಾ.ಜಿ.ಪರಮೇಶ್ವರ ಕೂಡ ಘಟನೆಯ ಬಗ್ಗೆ ಪ್ರತಿಕ್ರಿಯಿಸಿದ್ದು,ಬುಧವಾರ ಲೋಕಸಭೆಯಲ್ಲಿ ಏನಾಯಿತು ಎಂಬುದನ್ನು ಇಡೀ ಜಗತ್ತು ನೋಡಿದೆ. ಇಬ್ಬರು ಯುವಕರು ಲೋಕಸಭೆಗೆ ಜಿಗಿದು ಗದ್ದಲ ಸೃಷ್ಟಿಸಿದ್ದಾರೆ. ಅವರು ಅದನ್ನು ಹೇಗೆ ಮಾಡಿದರು ಎಂಬುದು ನಂಬಲಾಗದ ಸಂಗತಿಯಾಗಿದೆ. ಬೆಳಗಾವಿಯ ಸುವರ್ಣಸೌಧದಲ್ಲಿ ಭದ್ರತೆಯನ್ನು ಹೆಚ್ಚಿಸಲಾಗಿದ್ದು, ಬೆಂಗಳೂರಿನ ವಿಧಾನಸೌಧದಲ್ಲಿಯೂ ಹೆಚ್ಚಿನ ನಿಗಾ ವಹಿಸಲಾಗುವುದು.

ಎಲ್ಲಕ್ಕಿಂತ ಮುಖ್ಯವಾಗಿ ಪಾಸ್‌ಗಳನ್ನು ಮೈಸೂರಿನ ಲೋಕಸಭಾ ಸಂಸದ ಪ್ರತಾಪ್ ಸಿಂಹ ವಿತರಿಸಿದ್ದಾರೆ. ಅವರು ಅವರನ್ನು ತಿಳಿದಿದ್ದರು ಮತ್ತು ಪಾಸ್‌ಗಳನ್ನು ನೀಡಿದರು. ಪ್ರತಾಪ್ ಸಿಂಹ ಅವರನ್ನು ಲೋಕಸಭೆಯಿಂದ ಅಮಾನತುಗೊಳಿಸಬೇಕು. ಘಟನೆಯ ಬಗ್ಗೆ ಪ್ರಧಾನಿ ಮತ್ತು ಗೃಹ ಸಚಿವರು ಇನ್ನೂ ಯಾವುದೇ ಪ್ರತಿಕ್ರಿಯೆ ನೀಡದಿರುವುದು ಆಶ್ಚರ್ಯಕರವಾಗಿದೆ ಎಂದು ಪರಮೇಶ್ವರ ಹೇಳಿದರು.


ಇಡೀ ಘಟನೆಗೆ ಪ್ರತಾಪ್ ಸಿಂಹ ಅವರನ್ನು ಹೊಣೆಗಾರರನ್ನಾಗಿ ಮಾಡಬೇಕು ಮತ್ತು ವಿಚಾರಣೆ ಬಾಕಿ ಇರುವ ಲೋಕಸಭೆಯಿಂದ ಅಮಾನತುಗೊಳಿಸಬೇಕು. ಘಟನೆಯಲ್ಲಿ ತಮ್ಮ ಪಕ್ಷದ ಮುಖಂಡರು ಭಾಗಿಯಾಗಿದ್ದು, ಏನೂ ಆಗಿಲ್ಲ ಎಂಬಂತೆ ಬಿಂಬಿಸುತ್ತಿರುವುದ–ರಿಂದ ಬಿಜೆಪಿ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿಲ್ಲ. ಅವರು ಸಿಂಹ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಯತೀಂದ್ರ ಹೇಳಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಲೋಕಸಭೆಯ ಸೆಕ್ರೆಟರಿಯೇಟ್ ಎಂಟು ಭದ್ರತಾ ಸಿಬ್ಬಂದಿಯನ್ನು ಅಮಾನತುಗೊಳಿಸಿದೆ ಮತ್ತು ದೆಹಲಿ ಪೊಲೀಸರು ಪ್ರಕರಣದಲ್ಲಿ ಬಂಧಿತರಾಗಿರುವ ಐದು ಜನರನ್ನು ವಿಚಾರಣೆ ನಡೆಸುತ್ತಿದ್ದಾರೆ.

## ರಾಜ ನುಡಿ

ಏನನ್ನೂ ಬೆಳೆಯಲಾಗದ ಘನವಸ್ತು "ಮರಳು" ಅತಿ ಹೆಚ್ಚಿನ ಶಾಖಕ್ಕೆ (1700ಲಿಅ) ಒಳಪಟ್ಟು ದ್ರವವಾದಾಗ ಮುಖ ತೋರುವ "ಕನ್ನಡಿ" ಯಾಗಿ ಪರಿವರ್ತನೆ ಹೊಂದುತ್ತದೆ. ಹಾಗೆಯೇ ದೂಷಣೆಗಳು, ಕಷ್ಟಗಳು ಬದುಕಲ್ಲಿ ಬಂದಾಗ ಧೃತಿಗೆಡದೆ ಆಡಿಕೊಳ್ಳುವವರ ಮುಣ ಕಾಣುವಂತೆ ನಾವು ಕೂಡ ಕನ್ನಡಿಯಂತೆ ಪರಿವರ್ತನೆ ಹೊಂದೋಣ.

–ಡಾ. ರಾಜಶೇಖರ ನಾಗೂರ



## ವಚನ ಚಿಂತನ 255

### ಅಂಗೈಯಲ್ಲಿನ ಲಿಂಗ ಚಿತ್ತದಲ್ಲಿ ಹಿಂಗದಿರಬೇಕು

*ಮಹಾಬೆಳಗಿನ ಲಿಂಗವ ಕೈಯಲ್ಲಿ ಕೊಟ್ಟಡೆ*
*ಕೊರಳಲ್ಲಿ ಕಟ್ಟಿಕೊಳ್ಳಲೇಕೆ ?*
*ನೋಡುವ ಕಣ್ಣು ಮುಚ್ಚಿದ ಮತ್ತೆ ,*
*ತನಗೆ ಎಡೆಯಾಟವುಂಟೆ ?*
*ಲಿಂಗವ ಹಿಂಗದೆ ಅಂಗೈಯಲ್ಲಿ ಕೊಟ್ಟ ಮತ್ತೆ,*
*ಚಿತ್ತದಲ್ಲಿ ಹಿಂಗದಿರಬೇಕು*
*ಉರಿಲಿಂಗ ತಂದೆಯ ಸಿರಿಯ ಭಾಷೆ*

*– ಉರಿಲಿಂಗದೇವರು*

ನಾವು ಕೊರಳಲ್ಲಿ ಕಟ್ಟಿಕೊಂಡಿರುವ ಲಿಂಗದಮಹತ್ವವನ್ನು ಅರಿಯದ ಬಗ್ಗೆ ಈ ವಚನದಲ್ಲಿ ಉರಿಲಿಂಗದೇವರು ಮರುಗಿದ್ದಾರೆ. ಮತ್ತು ಇಂದು ಅನೇಕ ಜನ ಕೈಯಲ್ಲಿ ಲಿಂಗಹಿಡಿದು ಕಣ್ಣು ಮುಚ್ಚಿ ಲಿಂಗಪೂಜೆಗೈಯುವವರ ಕುರಿತು ನೋಡುವ ಕಣ್ಣು ಮುಚ್ಚಿದ ಮತ್ತೆ, ತನಗೆ ಎಡೆಯಾಟವುಂಟೆ ? ಎಂದು ಖಂಡಿಸಿದ್ದಾರೆ. ಅಂಗೈಯಲ್ಲಿನ ಲಿಂಗವನ್ನು ಅನಿಮಿಷ(ಅರೆಮುಚ್ಚಿದ ಕಣ್ಣಿನಿಂದ)ದೃಷ್ಟಿಯಿಂದ ನಿರೀಕ್ಷಿಸಬೇಕು, ಆದರೆ ಲಿಂಗವನ್ನು ಅಂಗೈಯಲ್ಲಿ ಹಿಡಿದು ಪೂರ್ತಿಯಾಗಿ ಕಣ್ಣುಮುಚ್ಚಿ ದ್ಯಾನಾಸಕ್ತರಾಗುವುದು ಲಿಂಗಪೂಜೆಯ ಸರಿಯಾದ ಕ್ರಮವಲ್ಲವೆಂದಿರುವರು. ಲಿಂಗವ ಹಿಂಗದೆ ಅಂಗೈಯಲ್ಲಿ ಕೊಟ್ಟ ಮತ್ತೆ, ಚಿತ್ತದಲ್ಲಿ ಹಿಂಗದಿರಬೇಕು ಎನ್ನುವುದು ಅತ್ತಲಿತ್ತ ಹರಿದಾಡುವ ಮನ/ಚಿತ್ತವನ್ನು ಲಿಂಗದಲ್ಲಿ ಲೀನಗೊಳಿಸಿಲಿಂಗವನ್ನು ದೃಷ್ಟಿಸಿ, ಲಿಂಗವನು ಮನದಲಿ ನೆನೆನೆನೆದುಲಿಂಗಾಂಗ ಸಾಮರಸ್ಯ ಸಾಧಿಸಬೇಕೆಂದು ತಿಳಿಸಿದ್ದಾರೆ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

# ಲಿಂಗತ್ವ ಅಲ್ಪಸಂಖ್ಯಾತರಿಗೆ ಗುರುತಿನ ಚೀಟಿ ವಿತರಣೆ




ಉದಯರಶ್ಮಿ ನ್ಯೂಸ್

ವಿಜಯಪುರ: ನ್ಯಾಶನಲ್ ಪೋರ್ಟಲ್‌ನಲ್ಲಿ ನೊಂದಣಿಯಾದ ವಿಜಯಪುರ ಜಿಲ್ಲೆಯ ಲಿಂಗತ್ವ ಅಲ್ಪಸಂಖ್ಯಾತರಿಗೆ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಗುರುತಿನ ಚೀಟಿ ವಿತರಿಸಿದರು.

ನ್ಯಾಶನಲ್ ಪೋರ್ಟಲ್‌ನಲ್ಲಿ ನೊಂದಣಿ ಮಾಡಿಕೊಂಡ ಜಿಲ್ಲೆಯ 100 ಲಿಂಗತ್ವ ಅಲ್ಪಸಂಖ್ಯಾತ–ರಿಗೆ ಗುರುವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುತಿನ ಚೀಟಿಯನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಮಾತನಾಡಿ, ಲಿಂಗತ್ವ ಅಲ್ಪಸಂಖ್ಯಾತ ಸಮುದಾಯ ಮುಖ್ಯವಾಹಿನಿಯಲ್ಲಿ ತಮ್ಮ ಬದುಕು ಕಟ್ಟಿಕೊಳ್ಳಲು ಜಿಲ್ಲಾಡಳಿತದಿಂದ ಸಂಪೂರ್ಣ ಬೆಂಬಲ ನೀಡುವುದಾಗಿ ತಿಳಿಸಿದ ಅವರು, ಮಹಾನಗರ ಪಾಲಿಕೆಯಿಂದ ಲಿಂಗತ್ವ ಅಲ್ಪಸಂಖ್ಯಾತರಿಗೆ ವಸತಿ ಕಲ್ಪಿಸುವ ಕುರಿತು ಸಹ ಪರಿಶೀಲನೆ ನಡೆಸಿ, ಸಮುದಾಯಕ್ಕೆ ಅನುಕೂಲ ಕಲ್ಪಿಸಲಾಗುವುದು ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಕೆ.ಕೆ.ಚವ್ಹಾಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿಗಮದ ನಿರೀಕ್ಷಕರಾದ ವಿಠ್ಠಲ ಹೆರಕಲ್, ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದ ಪ್ರತಿನಿಧಿಗಳಾದ ಶಬ್ಬಿರ ಕಾಗಜಕೋಟೆ, ನವಸ್ಫೂರ್ತಿ ಸಂಘ, ಮಲ್ಲು ಕೆಎಸ್‌ಎಂಎಫ್, ಪ್ರಾರ್ಥನಾ, ಗುಲಾಬ, ಈರಮ್ಮ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ವಸತಿ ಯೋಜನೆಯಲ್ಲಿ ಅಕ್ರಮ: ಗ್ರಾಪಂ ಸದಸ್ಯನ ಧರಣಿ



ಉದಯರಶ್ಮಿ ನ್ಯೂಸ್

ಮುದ್ದೇಬಿಹಾಳ : ತಾಲೂಕಿನ ಹುಲ್ಲೂರು ಗ್ರಾ.ಪಂ ನ ಕಾರ್ಯಾಲಯದ ಎದುರು ಬಸವ ವಸತಿ ಯೋಜನೆಯಲ್ಲಿ ಆಯ್ಕೆ ಪ್ರಕ್ರಿಯೆಯಲ್ಲಿ ಸರ್ಕಾರದ ಆದ–'ೇಶಗಳನ್ನು ಗಾಳಿಗೆ ತೂರಿದ್ದು ತನಿಖೆ ನಡೆಸುವಂತೆ ಸೇರಿದಂತೆ ಹಲವು ಬೇಡಿಕೆಗಳನ್ನು ಮುಂದಿಟ್ಟು ಗುರುವಾರ ಗ್ರಾಮ ಪಂಚಾಯತ ಸದಸ್ಯ ಶಿವಾನಂದ ಲಮಾಣಿ ಬೆಂಬಲಿಗರೊಂದಿಗೆ ಧರಣಿ ಸತ್ಯಾಗ್ರಹ ಆರಂಭಿಸಿದರು.

ಈ ಕುರಿತು ಮಾಧ್ಯಮಕ್ಕೆ ಮಾಹಿತಿ ನೀಡಿದ ಶಿವಾನಂದ, ಹುಲ್ಲೂರ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಸುಪುತ್ರ ಕಲ್ಮೇಶ ಮಾದರ ಉಪಾಧ್ಯಕ್ಷೆ ಸುಪುತ್ರ ವಿನೋದ ಓಲೇಕಾರ ಮತ್ತು ಪ್ರಭಾರಿ ಅಭಿವದ್ಧಿ ಅಧಿಕಾರಿ ರಾಜೇಂದ್ರ ಎಕ್ಸಂಬಿ ತಮ್ಮ ಅಣತಿಯಂತೆ ನಡೆಯುವ ನಾಲ್ಕು ಜನ ಸದಸ್ಯರನ್ನು ಸೇರಿಸಿಕೊಂಡು ಸಾಮಾನ್ಯ ಸಭೆಗಳನ್ನು ನಡೆಸದೇ ಮನಸೋಯಿಚ್ಚೆ ಕೆಲಸಗಳನ್ನು ಮಾಡಿದ್ದಾರೆ. ಕೆಲವು ದಿನಗಳ ಹಿಂದೆ ನಡೆದ ಬಸವ ವಸತಿ ಯೋಜನೆಯಲ್ಲಿ ಆಯ್ಕೆ ಪ್ರಕ್ರಿಯೆ ತಡೆಗೆ ಕೋರಿ ನಾನು ಅರ್ಜಿ ಸಲ್ಲಿಸಿದ್ದರು ಕ್ಯಾರೆ ಅನ್ನದೇ ತಾರಾತುರಿಯಲ್ಲಿ ಜಿ.ಪಿ. ಎಸ್ ಮಾಡಿ ಒಟ್ಟು 72 ಮನೆಗಳನ್ನು ಆಯ್ಕೆ ಮಾಡಿದ್ದಾರೆ. ಇದು ಘೋರ ಅಪರಾಧವಾಗಿದ್ದು ಇಲ್ಲಿ ಸರಕಾರದ ಆದೇಶ ಗಾಳಿಗೆ ತೂರಿದ್ದಾರೆ. ಕಾರಣ ಕೂಡಲೇ ಈ ಬಗ್ಗೆ ತನಿಖೆ ನಡೆಸಬೇಕು ಎಂದು ಆಗ್ರಹಿಸಿ ಧರಣಿ ಆರಂಭಿಸಿದ್ದು ಶುಕ್ರವಾರ ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾ–ರಿಗಳು ಸ್ಪಂದನೆ ನೀಡದಿದ್ದಲ್ಲಿ ಹೋರಾಟ ರೂಪರೇಷೆಗಳನ್ನು ಬದಲಾಯಿಸುವುದಾಗಿ ತಿಳಿಸಿದ್ದಾರೆ.

ಧರಣಿಗೆ ಸದಸ್ಯರಾದ ದಿಲೀಪಕುಮಾರ ನಾಯಕ ಮತ್ತು ಅಶೋಕಗೌಡ ಬಿರಾದಾರ ಬೆಂಬಲಿಸಿದ್ದಾರೆ.

### ಸಂಸ್ಕೃತ ಪಾಠಶಾಲಾ ಶಿಕ್ಷಕರಿಗೆ ಪುನಶ್ಚೇತನ ಶಿಬಿರದ ಸಮಾರೋಪದಲ್ಲಿ ಮಾಜಿ ಎಂಎಲ್ಸಿ ಅರುಣ ಶಹಾಪೂರ ಅಭಿಮತ

# ಸಂಸ್ಕೃತ ಭಾರತೀಯ ಸಂಸ್ಕೃತಿ ಪರಂಪರೆಯ ಸಂಕೇತ




**ಉದಯರಶ್ಮಿ ನ್ಯೂಸ್**

ಸಿಂದಗಿ: ಸಂಸ್ಕೃತ ಭಾಷೆ ಅತ್ಯಂತ ಪುರಾತನ ಭಾಷೆ ನಮ್ಮ ಭಾಷೆ. ಚೈನಾ ದೇಶದಲ್ಲಿಯೂ ಕೂಡಾ ಸಂಸ್ಕೃತ ಬಳಕೆಯಲ್ಲಿ ಇದೆ ಎಂದರೆ ಅದು ಭಾರತದ ಹೆಮ್ಮೆಯ ಸಂಗತಿ. ಆದ–'ರೆ ನಮ್ಮ ಸಂಸ್ಕೃತ ಭಾಷೆಯನ್ನು ಭಾರತೀಯರೆ ಆದ ನಾವುಗಳೂ ಅದನ್ನು ಪ್ರಚಾರ, ಪ್ರಸಾರ ಮಾಡದೆ ದೂರ ಮಾಡಿದ್ದೇವೆ ಎಂಬುದೇ ವಿಷಾದನೀಯ ಎಂದು ಮಾಜಿ ವಿಧಾನ ಪರಿಷತ್ ಸದಸ್ಯ ಅರುಣ ಶಹಾಪೂರ ಕಳವಳ ವ್ಯಕ್ತಪಡಿಸಿದರು.

ಅವರು ಪಟ್ಟಣದ ಶ್ರೀ ಸಾತವಿರೇಶ್ವರ ಸಭಾಭವನದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ ಮತ್ತು ಶ್ರೀ ಪದ್ಮರಾಜ ಸಂಸ್ಕೃತ ವೇದ ಪಾಠಶಾಲೆ ಇವುಗಳ ಸಹಯೋಗದಲ್ಲಿ 10 ದಿನಗಳ ಕಾಲ ಆಯೋಜಿಸಿರುವ ಸಂಸ್ಕೃತ ಪಾಠಶಾಲಾ ಶಿಕ್ಷಕರಿಗೆ ಪುನಶ್ಚೇತನ ಶಿಬಿರದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಸಂಸ್ಕೃತ ಭಾಷೆ ಭಾರತೀಯ ಸಂಸ್ಕೃತಿಯು ಪರಂಪರೆಯು ಸಂಕೇತವಾಗಿದೆ. ಈ ಭಾಷೆ ನಮ್ಮ ಸಮಾಜವನ್ನು ಹಲವು ವರ್ಷಗಳಿಂದ ಶ್ರೀಮಂತಗೊಳಿಸುತ್ತಾ ಬಂದಿದೆ.ಇಂದಿನ ಮತ್ತು ಮುಂದಿನ ಪೀಳಿಗೆಗೆ ಈ ಭಾಷೆಯ ಮಹತ್ವ ತಿಳಿಯಪಡಿಸುವುದು ಅತ್ಯಂತ ಅವಶ್ಯವಾಗಿದೆ ಎಂದರು.

ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಿದ ಬಿಎಲ್‌ಡಿಇ ಸಂಸ್ಥೆಯ ಆರ್ಯುವೇದಿಕ ಕಾಲೇಜ್ ಪ್ರಾಚಾರ್ಯ ಡಾ.ಸಂಜಯ ಕಡ್ಲಿಮಟ್ಟಿ ಮಾತನಾಡಿ, ಸಂಸ್ಕೃತ ಭಾಷೆಯ ಬೆಳವಣಿಗೆಗೆ ಸರ್ಕಾರಗಳು ಹೆಚ್ಚು ಮಹತ್ವ ನೀಡಿ ಇದರ ವ್ಯಾಪ್ತಿಯನ್ನು ವಿಶಾಲ ಮಾಡಬೇಕು. ಪ್ರಾಥಮಿಕ ಹಂತದಿಂದ ಇದರ ಮಹತ್ವ ಮಕ್ಕಳಿಗೆ ಅರಿವು ನೀಡುವಂತಾಗಬೇಕು ಎಂದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ ನಿರ್ದೇಶಕ ಪ್ರೊ.ಜಿ.ಪಾಲಯ್ಯ ಹಾಗೂ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ ಸಹಾಯಕ ನಿರ್ದೇಶಕರು ಪ್ರೊ.ಮಲ್ಲನಗೌಡ ಎಸ್ ಮಾತನಾಡಿ, 10 ದಿನಗಳ ಕಾಲ ನಡೆದ ಪುನಶ್ಚೇತನ ಶಿಬಿರ ಸಂಸ್ಕೃತ ಪಾಠಶಾಲಾ ಶಿಕ್ಷಕರಿಗೆ ಅತ್ಯಂತ ನೆರವಾಗಿದೆ. ಸಂಸ್ಕೃತ ಭಾಷೆಯ ಅಧ್ಯಯನಂದಿದ ಮುಂದಿನ ದಿನಮಾನಗಳಲ್ಲಿ ಹೆಚ್ಚು ಹೆಚ್ಚು ಅವಕಾಶಗಳು ಮೂಡಿಬರಲಿವೆ ಎಂದರು.

ಸಮ್ಮುಖ ವಹಿಸಿದ ಕನ್ನೋಳ್ಳಿ ಹಿರೇಮಠದ ಶ್ರೀ ಸಿದ್ದಲಿಂಗ ಶಿವಾಚಾರ್ಯರು ಆಶೀರ್ವಚನ ನೀಡಿದರು. ಸಾರಂಗಮಠದ ಡಾ.ಪ್ರಭುಸಾರಂಗದೇವ ಶಿವಾಚಾರ್ಯರು ಸಾನಿಧ್ಯ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಅಶೋಕ ವಾರದ, ಜಗದೀಶ ಕರೆಪ್ಪನವರ, ಬಿ.ಬಿ.ಆರ್ಯರ್, ಚನ್ನಬಸವರಾಜ ಕತ್ತಿ, ವಿರೇಶ ಸ್ತಾವರಮಠ ಮತ್ತು ಬೆಳಗಾವಿ ಧಾರವಾಡ, ಮೈಸೂರ ವಲಯಗಳ ಸುಮಾರು 15 ಜಿಲ್ಲೆಗಳ ಅನುದಾನಿತ ಮತ್ತು ಅನುದಾನ ರಹಿತ ಸಂಸ್ಕೃತ ಪಾಠಶಾಲೆಯ ಸುಮಾರು 250 ಕ್ಕೂ ಶಿಕ್ಷಕರು ಭಾಗವಹಿಸಿದ್ದರು.

ಶಿಕ್ಷಕಿ ಸುವರ್ಣ.ವೈ ನಿರೂಪಿಸಿದರು, ಶಿಕ್ಷಕ ನರಂಸಿವ ಭಟ್ಟ ಸ್ವಾಗತಿಸಿದರು, ಶಿಕ್ಷಕರ ಕಲ್ಮೇಶ ನಾಯಕ ವಂದಿಸಿದರು.

# ರೇವತಗಾಂವ ಸರ್ಕಾರಿ ಶಾಲಾ ಬಿಸಿಯೂಟದಲ್ಲಿ ಇಡ್ಲಿ–ಸಾಂಬಾರ



**ಉದಯರಶ್ಮಿ ನ್ಯೂಸ್**

ಚಡಚಣ: ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಎನ್ನುವ ಉದ್ದೇಶದಿಂದ ಸರ್ಕಾರ ಬಿಸಿಯೂಟ ಯೋಜನೆಯನ್ನು ಜಾರಿಗೆ ತಂದಿದೆ. ಈ ಹಿನಲೆಯಲ್ಲಿ ಶಿಕ್ಷಕರು ಮಕ್ಕಳಿಗೆ ಗುಣಮಟ್ಟದ ಆಹಾರವನ್ನು ಒದಗಿಸಿ ಈ ಯೋಜನೆಯನ್ನು ಯಶಸ್ವಿಗೊಳಿಸಬೇಕಾಗಿದೆ ಎಂದು ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಅಶೋಕ ಬಿಜ್ಜರಗಿಯವರು ಹೇಳಿದರು.

ರೇವತಗಾಂವ ಗ್ರಾಮದ ಸರ್ಕಾರಿ ಮಾದರಿ ಹಿರಿಯ ಪ್ರಾಥ–'ಮಿಕ ಶಾಲೆಯಲ್ಲಿ ಗುರುವಾರದಂದು ಬಿಸಿಯೂಟ ಯೋಜನೆಯಲ್ಲಿ ಮಕ್ಕಳಿಗೆ ಇಡ್ಲಿ–ಸಾಂಬಾರ ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ಮಾತನಾಡಿದ ಅವರು. ಅಕ್ಷರ ದಾಸೋಹ ಯೋಜನೆಯಡಿಯಲ್ಲಿ ಶಿಕ್ಷಕರು ಮಕ್ಕಳಿಗೆ ವಾರದಲ್ಲಿ ಒಂದು ದಿನ ಇಡ್ಲಿ–ಸಾಂಬಾರ ನೀಡುವ ವ್ಯವಸ್ಥೆಯನ್ನು ಕಲ್ಪಿಸಿರುವುದು ಮಕ್ಕಳ ಕಲಿಕೆಗೆ ಉತ್ತಮ ಬೆಳವಣಿಗೆಯಾಗಿದೆ ಎಂದರು. ಹೊಸ ಪಠ್ಯ ಕ್ರಮಕ್ಕೆ ಅನುಗುಣವಾಗಿ ಶಿಕ್ಷಕರು ನೂತನ ಕೌಶಲ್ಯಗಳನ್ನು ಬಳಸಿಕೊಂಡು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕ್ಷೇತ್ರದಲ್ಲಿ ಪ್ರಗತಿ ಕಾಣಲು ಸಾಧ್ಯ ಎಂದರು.

ಈ ವೇಳೆಯಲ್ಲಿ ಶಾಲೆಯ ಮುಖ್ಯ ಗುರು ಆರ್.ಎನ್. ಹತ್ತಳ್ಳಿಯವರು ಮಾತನಾಡಿ. ಗ್ರಾಮೀಣ ಪ್ರದೇಶದಲ್ಲಿ ತಂದೆ–ತಾಯಿ ಕೂಲಿ ಕೆಲಸಕ್ಕೆ ಹೋಗುವುದರಿಂದ ಬಹುತೇಕ ಮಕ್ಕಳು ಆಹಾರವನ್ನು ಬಾಕ್ಸಲ್ಲಿ ತೆಗೆದುಕೊಂಡು ಬಂದು ಶಾಲೆಯಲ್ಲಿಯೇ ಮಧ್ಯಾಹ್ನದ ಊಟ ಮಾಡುತ್ತಿದ್ದಾರೆ. ಕೆಲ ಮಕ್ಕಳು ಹಸಿದುಕೊಂಡೇ ಮನೆಗೆ ತೆರಳುವ ಸ್ಥಿತಿ ಇದೆ. ಸರ್ಕಾರ ಬಿಸಿಯೂಟ ಯೋಜನೆ ಆರಂಭಿಸಿದರೆ ಮಕ್ಕಳಿಗೂ ಅನುಕೂಲವಾಗಲಿದೆ ಎಂಬುದರ ಪಾಲಕರ ಅಭಿಪ್ರಾಯದ ಮೇರೆಗೆ ಸರ್ಕಾರ ಬಿಸಿಯೂಟ ಯೋಜನೆ ಆರಂಭಿಸಿರುವುದು ಸಂತೋಷ ತಂದಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಾಲೆಯ ಶಿಕ್ಷಕರಾದ ಎಸ್.ಡಿ.ಆದಿಗೊಂಡೆ, ಎಸ್.ಜೆ.ಬಿಜ್ಜರಗಿ, ಪಿ.ಎ.ವಾಲಿಕಾರ, ಎಂ.ಕೆ.ಬಗಲಿ, ಎ.ಎಚ್.ಬಗಲಿ, ಎನ.ಎಸ್.ಘೋಡೇಸವಾರ, ಎಂ. ಎಸ್.ಶೇಖ, ಹೀನಾ ಸೈಯದ, ಬಿ.ಎಚ್.ಪಾಟೀಲ ಹಾಗೂ ಹಣಮಂತ ಹಕ್ಕೆ, ಮಲ್ಲಪ್ಪ ಡೋಣಜ ಸೇರಿದಂತೆ ಶಾಲಾ ವಿದ್ಯಾರ್ಥಿಗಳು ಉಪಸ್ಥಿತ–ರಿದ್ದರು.

# ಡಿ.16 ರಂದು ವಿದ್ಯುತ್ ಗ್ರಾಹಕರ ಸಂವಾದ ಸಭೆ

**ಉದಯರಶ್ಮಿ ನ್ಯೂಸ್**

ವಿಜಯಪುರ: ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ವತಿಯಿಂದ ವಿಜಯಪುರ ತಾಲೂಕಿನ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗಕ್ಕೆ ಸಂಬಂಧಿಸಿದಂತೆ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ಕಚೇರಿಯಲ್ಲಿ ಡಿ.16 ರಂದು ಬೆಳಿಗ್ಗೆ 10 ಗಂಟೆಗೆ ವಿದ್ಯುತ್ಮ ಗ್ರಾಹಕರ ಸಂವಾದ ಸಭೆ ಆಯೋಜಿಸಲಾಗಿದೆ.

ಗ್ರಾಮೀಣ ಉಪ ವಿಭಾಗದ ಕಚೇರಿ ವ್ಯಾಪ್ತಿಯ ಗ್ರಾಮಗಳ ಗ್ರಾಹಕರು ಮತ್ತು ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಿ ಸದುಪಯೋಗ ಪಡೆದುಕೊಳ್ಳುವಂತೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ಕೋರಿದ್ದಾರೆ.

# ಸಿದ್ಧೇಶ್ವರ ಶ್ರೀ ಗುರು ನಮನ: ಆರೋಗ್ಯ ಉಚಿತ ಶಿಬಿರ



**ಉದಯರಶ್ಮಿ ನ್ಯೂಸ್**

ವಿಜಯಪುರ: ನಗರದ ಸಾಕ್ಷಿ ಹನುಮಾನ ಮಂದಿರ, ಗಣೇಶ ನಗರದ ಜನತೆ ಮತ್ತು ಮಹಾನಗರಪಾಲಿಕೆ ಸದಸ್ಯ ಕುಮಾರ ಗಡಗಿ ಅವರ ನೇತೃತ್ವದಲ್ಲಿ ಶ್ರೀ ತುಳಸಿಗಿ–ರೀಶ ಫೌಂಡೇಶನ್ ಮತ್ತು ಶ್ರೀ ತುಳಸಿಗಿರೀಶ ಮಧುಮೇಹ ಆಸ್ಪತ್ರೆ, ವಿಜಯಪುರ ವತಿಯಿಂದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳ ಗುರು ನಮನ ಮಹೋತ್ಸವ ನಿಮಿತ್ತ ಗುರುವಾರ ಉಚಿತ ಆರೋಗ್ಯ ಚಿಕಿತ್ಸಾ ಶಿಬಿರ ನಡೆಯಿತು.

ನಗರದ ವಾರ್ಡ್ ನಂ. 21, ಗಣೇಶ ನಗರ, ಶ್ರೀ ಸಿದ್ಧಿವಿನಾಯಕ ಮತ್ತು ಶ್ರೀ ಸಾಕ್ಷಿ ಹನುಮಾನ್ ದೇವಸ್ಥಾನದಲ್ಲಿ ನೂರಾರು ಜನರ ಮಧುಮೇಹ ಹಾಗೂ ಬಿಪಿ ತಪಾಸಣೆ ನಡೆಸಿ ಸೂಕ್ತ ಸಲಹೆ ಮಾರ್ಗದರ್ಶನ ನೀಡಲಾಯಿತು.

ಮಧುಮೇಹ ತಜ್ಞ ಡಾ.ಬಾಬುರಾಜೇಂದ್ರ ನಾಯಿಕ, ಹೃದಯರೋಗ ತಜ್ಞೆ ಡಾ.ಶೀತಲ ನಾಯಿಕ ಶಿಬಿರದಲ್ಲಿ ಮಾರ್ಗದರ್ಶನ ನೀಡಿದರು.

# ಪ್ರವಾಸಿ ಟ್ಯಾಕ್ಸಿ ಯೋಜನೆ ಆಯ್ಕೆಪಟ್ಟಿ ಪ್ರಕಟ

**ಉದಯರಶ್ಮಿ ನ್ಯೂಸ್**

ವಿಜಯಪುರ: ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಸ್ವಾವಲಂಬಿ ಸಾರಥಿ ವಾಹನ ಖರೀದಿ ಸಹಾಯಧನ ಯೋಜನೆಯಡಿ ಪ್ರವಾಸಿ ಟ್ಯಾಕ್ಸಿ–ಸರಕು ವಾಹನ ಖರೀದಿಗೆ ಫಲಾನುಭವಿಗಳನ್ನು ನವೆಂಬರ್ 21ರಂದು ಆಯ್ಕೆ ಸಮಿತಿ ಸಭೆಯಲ್ಲಿ ಆಯ್ಕೆ ಮಾಡಲಾಗಿದೆ ಎಂದು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

ಪ್ರವಾಸಿ ಟ್ಯಾಕ್ಸಿ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳ ಪಟ್ಟಿಯನ್ನು ನಿಗಮದ ಜಿಲ್ಲಾ ವ್ಯವಸ್ಥಾಪಕರ ಕಚೇರಿಯ ನೋಟಿಸ್ ಬೋರ್ಡಿನಲ್ಲಿ ಪ್ರಕಟಿಸಲಾಗಿದೆ. ಈ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವ್ಯವಸ್ಥಾಪಕರ ಕಚೇರಿ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಮೌಲಾನಾ ಆಝಾದ ಭವನ, ಜಿಲ್ಲಾ ಪಂಚಾಯತ್ ರಸ್ತೆ, ಕನಕದಾಸ ಬಡಾವಣೆ, ವಿಜಯಪುರ–586109 ದೂ: 08352–278344 ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ಉಪಾಧ್ಯಕ್ಷರಾಗಿ ಭಾರತಿ ಕಾಲೇಬಾಗ ಆಯ್ಕೆ




**ಉದಯರಶ್ಮಿ ನ್ಯೂಸ್**

ವಿಜಯಪುರ : ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಪರಿಶಿಷ್ಟ ಜಾತಿ ವಿಭಾಗದ ರಾಜ್ಯಾಧ್ಯಕ್ಷರಾದ ಆರ್. ಧರ್ಮಸೇನಾ ಇವರ ನಿರ್ದೇಶನದ ಮೇರೆಗೆ ಭಾರತಿ ಲವ ಕಾಲೇಬಾಗ ಇವರನ್ನು ವಿಜಯಪುರ ಜಿಲ್ಲಾ ಕಾಂಗ್ರೆಸ್ ಪಕ್ಷದ ಪರಿಶಿಷ್ಟ ಜಾತಿ ವಿಭಾಗದ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಸಮಿತಿ ಪ.ಜಾ.ವಿಭಾಗದ ಅಧ್ಯಕ್ಷರಾದ ರಮೇಶ ಕಾ.ಗುಬ್ಬೇವಾಡ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದೇವರಹಿಪ್ಪರಗಿ: ಜಂಗಮ ವಟುಗಳಿಗೆ ಅಯ್ಯಾಚಾರ ದೀಕ್ಷೆ



**ಉದಯರಶ್ಮಿ ನ್ಯೂಸ್**

ದೇವರಹಿಪ್ಪರಗಿ: ಜಂಗಮರು ಪೂರ್ವಜರ ಆಚಾರ ವಿಚಾರಗಳನ್ನು ಅರಿತು ಕಟ್ಟುನಿಟ್ಟಾಗಿ ಪಾಲಿಸುವ ಮೂಲಕ ಧರ್ಮರಕ್ಷಣೆಗೆ ಮುಂದಾಗಬೇಕು ಎಂದು ಜಡಿಮಠದ ಜಡಿಸಿದ್ದೇಶ್ವರ ಸ್ವಾಮೀಜಿ ಹೇಳಿದರು.

ಪಟ್ಟಣದ ವೀರಭದ್ರೇಶ್ವರ ದೇವಸ್ಥಾನದಲ್ಲಿ ಗುರುವಾರ ಜಂಗಮ ವಟುಗಳಿಗೆ ಅಯ್ಯಾಚಾರ ದೀಕ್ಷೆ ನೀಡಿ ಅವರು ಮಾತನಾಡಿದರು.

8 ವರ್ಷ ವಯಸ್ಸಿನ ಎಲ್ಲ ಜಂಗಮರು ಸಂಪ್ರದಾಯದಂತೆ ಅಯ್ಯಾಚಾರ ದೀಕ್ಷೆ ಪಡೆಯಬೇಕು. ಇಂದು ಶಿವದೀಕ್ಷಾ ಪಡೆದ ವಟುಗಳು ತಮ್ಮ ಜೀವನದುದ್ದಕ್ಕೂ ನಿತ್ಯ ಸ್ನಾನದ ನಂತರ ಶಿವಪೂಜೆ ನೆರವೇರಿಸಬೇಕು ಇದರಿಂದ ನಿಮ್ಮ ಭವಿಷ್ಯಕ್ಕೆ ಭದ್ರ ಬುನಾದಿ ದೊರೆಯುದರಲ್ಲಿ ಯಾವುದೇ ಸಂದೇಹವಿಲ್ಲ ಎಂದರು.

ಸದಯ್ಯನಮಠದ ವೀರಗಂಗಾಧರಶ್ರೀಗಳು ವಟುಗಳಿಗೆ ಮಂತ್ರೋಚ್ಚಾರದ ಮಹತ್ವ ಹಾಗೂ ಶಿಷ್ಟಾಚಾರಗಳ ಕುರಿತು ಮಾಹಿತಿ ನೀಡಿದರು. ಜೊತೆಗೆ ಪಾಲಕರು, ಹಿರಿಯರು ನಮ್ಮ ಆಚಾರ, ವಿಚಾರಗಳನ್ನು ಪಾಲಿಸಲು ಮಕ್ಕಳಿಗೆ ತಿಳಿಹೇಳುವ ಮೂಲಕ ತಮ್ಮದೇಯಾದ ಕರ್ತವ್ಯ ಪಾಲಿಸಲು ಮುಂದಾಗಬೇಕು ಎಂದರು.

ತಾಲ್ಲೂಕು ನಿವೃತ್ತ ನೌಕರರ ಸಂಘದ ಅಧ್ಯಕ್ಷ ಸಿ.ಕೆ.ಕುದರಿ, ಪಟ್ಟಣ ಪಂಚಾಯಿತಿ ಸದಸ್ಯ ಶಾಂತಯ್ಯ ಜಡಿಮಠ, ಪಿ.ಜಿ.ಹಿರೇಮಠ, ಪಿ.ಎಸ್.ಮಿಂಚನಾಳ, ಯಲಗೂರೇಶ ದೇವೂರ, ಸಂಗಪ್ಪ ಮಣೂರ, ಚನ್ನಯ್ಯ ಮಲ್ಲಿಕಾರ್ಜುನಮಠ, ರಮೇಶ ಮಶಾನವರ, ಕಾಶೀನಾಥ ಹಿರೇಮಠ, ವೀರೇಶ ಕುದರಿ, ಕುಮಾರಸ್ವಾಮಿ ಹಿರೇಮಠ, ಈರಪ್ಪ ಹೊಸಮನಿ, ಕುಮಾರ ವಡ್ಡೋಡಗಿ, ಶಾಂತಯ್ಯ ಹಿರೇಮಠ, ಶ್ರೀಕಾಂತ ನಾಶಿಮಠ ಸೇರಿದಂತೆ ಮಹಿಳೆಯರು, ಮಕ್ಕಳು ಭಾಗವಹಿಸಿದ್ದರು.

# ಯತ್ನಾಳ ಜನ್ಮ ದಿನ: ಅನಾಥಾಶ್ರಮ ಮಕ್ಕಳಿಗೆ ಅನ್ನ ಪ್ರಸಾದ

**ಉದಯರಶ್ಮಿ ನ್ಯೂಸ್**




ವಿಜಯಪುರ: ನಗರ ಶಾಸಕ ಬಸನಗೌಡ ರಾ.ಪಾಟೀಲ ಯತ್ನಾಳ ಅವರ 61ನೇ ಜನ್ಮ ದಿನದ ಅಂಗವಾಗಿ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಸದಸ್ಯ ವಿಕ್ರಮ ಗಾಯಕವಾಡ ಅವರು ಆರ್ಫನೈಜ್ ಅನಾಥ ಆಶ್ರಮದ ಮಕ್ಕಳಿಗೆ ಬುಧವಾರ ಅನ್ನ ಪ್ರಸಾದ ವ್ಯವಸ್ಥೆ ಮಾಡಿದರು.

ನಂತರ ಮಾತನಾಡಿದ ಅವರು, ಅಭಿವೃದ್ಧಿ ಹರಿಕಾರ ಶಾಸಕರ ಜನ್ಮ ದಿನ ಅರ್ಥಪೂರ್ಣವಾಗಿ ಆಚರಿಸಬೇಕೆಂಬ ನಿಟ್ಟಿನಲ್ಲಿ ಅನಾಥ ಆಶ್ರಮದ ಮಕ್ಕಳೊಂದಿಗೆ ಕೇಕ್ ಕತ್ತರಿಸಿ, ಪ್ರಸಾದ ವ್ಯವಸ್ಥೆ ಮಾಡಲಾಗಿದೆ. ನಮ್ಮ ನಾಯಕರಿಗೆ ಉನ್ನತ ಹುದ್ದೆ ದೊರಕಿ, ನಾಡಿನ ಅಭಿವೃದ್ಧಿಗೆ ಶ್ರಮಿಸಲು ಅವಕಾಶ ಸಿಗಲಿ ಎಂದು ಪ್ರಾರ್ಥಿಸುತ್ತೇವೆ ಎಂದರು.

ಬಿಜೆಪಿ ಮುಖಂಡರಾದ ಬಾಬು ಶಿರಶ್ಯಾಡ, ಅಶೋಕ ಬೆಲ್ಲದ, ರಾಜಶೇಖರ ಭಜಂತ್ರಿ, ರಮೇಶ ಪಡಸಲಗಿ, ಶರಣು ಕಾಖಂಡಕಿ, ಬಸವರಾಜ ಗೊಳಸಂಗಿ, ಅಮಿತ್ ಗಡುಕರ, ನಾಗರಾಜ ಮುಳವಾಡ, ಕೃಷ್ಣಾ ರಾಠೋಡ, ಶ್ರೀಧರ ಮತ್ತಿತರರು ಇದ್ದರು.

# ಡಿ.17ರಂದು ಶ್ವಾನ ಪ್ರದರ್ಶನ :ನೊಂದಣಿಗೆ ಆಹ್ವಾನ

**ಉದಯರಶ್ಮಿ ನ್ಯೂಸ್**

ವಿಜಯಪುರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಡಿ.17 ರಂದು ಬೆಳಿಗ್ಗೆ 9 ಗಂಟೆಗೆ ನಗರದ ಜಿಲ್ಲಾ ಪೊಲೀಸ್ ಪರೇಡ್ ಮೈದಾನದಲ್ಲಿ ಶ್ವಾನ ಪ್ರದರ್ಶನ ಹಮ್ಮಿಕೊಂಡಿದ್ದು, ಶ್ವಾನ ಮಾಲೀಕರು ತಮ್ಮ ಎಲ್ಲ ವಿವಿಧ ತಳಿಗಳ ಶ್ವಾನಗಳ ಹೆಸರುಗಳನ್ನು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿ ಹೆಸರು ನೊಂದಾಯಿಸಿಕೊಳ್ಳುವಂತೆ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.

ಶ್ವಾನ ಪ್ರದರ್ಶನದಲ್ಲಿ ಭಾಗವಹಿಸಿದ ಉತ್ತಮ ಶ್ವಾನಗಳಿಗೆ ಬಹುಮಾನ ನೀಡಲಾಗುವುದು. ಶ್ವಾನಗಳ ಮಾಲೀಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಕೋರಲಾಗಿದ್ದು, ಈ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ ಮುಖ್ಯ ಪಶು ವೈದ್ಯಾಧಿಕಾ–ರಿಗಳಾದ ಡಾ.ಬಿ.ಎಸ್.ಕನಮಡಿ ಮೊ: 6361307916, ಡಾ.ಸುಜಾತ ಎಸ್.ಎಂ. ಮೊ: 9845873701, ಹಿರಿಯ ಪಶುವೈದ್ಯಾಧಿಕಾರಿ ಡಾ.ಸತೀಶ ಪಾಟೀಲ ಮೊ: 7349442318 ಸಂಖ್ಯೆಗೆ ಸಂಪರ್ಕಿಸುವಂತೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಭಗವದ್ಗೀತೆ ರತ್ನಗರ್ಭವಾಗಿದೆ :ಪ್ರಭಾ ಹೆಬ್ಬಾರ



**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಭಗವದ್ಗೀತೆ ರತ್ನಗರ್ಭವಾಗಿದೆ. ಭೂಮಿಯ ಆಳದಲ್ಲಿ ಯಾವೆಲ್ಲ ರೀತಿಯ ವಸ್ತುಗಳು ಹಂಚಿಕೆಯಾಗಿವೆಯೋ ಹಾಗೆ ಭಗವದ್ಗೀತೆ ವಿಸ್ತಾರವಾಗಿ ಮಹಾಸಾಗರೋಪಾದಿಯಲ್ಲಿ ವ್ಯಾಪಿಸಿದೆ ಎಂದು ಯೋಗ ಶಿಕ್ಷಕಿ ಪ್ರಭಾ ಹೆಬ್ಬಾರ ಹೇಳಿದರು.

ಪಟ್ಟಣದ ಆಲಮಟ್ಟಿ ರಸ್ತೆಯಲ್ಲಿರುವ ಅರಿಹಂತ (ಸಗರಿ) ಕಾಲೇಜಿನಲ್ಲಿ ಸರ್ವಜ್ಞೇಂದ್ರ ಸರಸ್ವತೀ ಪ್ರತಿಷ್ಠಾನ(ರಿ.) ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನ ಶಿರಸಿ ಇವರಿಂದ ಆಯೋಜಿಸಿರುವ ಭಗವದ್ಗೀತಾ ಅಭಿಯಾನ–ಕರ್ನಾಟಕ–2023ರ ತಾಲೂಕು ಮಟ್ಟದ ಸಪ್ತಾಹದ ಅಂಗವಾಗಿ ನಡೆದ 5ನೇ ದಿನದ ಪಠಣ ಮತ್ತು ಉಪನ್ಯಾಸ ಕಾರ್ಯಕ್ರಮದಲ್ಲಿ "ಭಗವದ್ಗೀತೆ ಮತ್ತು ಜೀವನ ಸಮೃದ್ಧಿ" ಎನ್ನುವ ವಿಷಯದ ಮೇಲೆ ಅವರು ಉಪನ್ಯಾಸ ನೀಡಿದರು.

ಜನರ ಪ್ರತಿಯೊಂದು ಲೌಖಿಕ ಮತ್ತು ಅಲೌಖಿಕ ಸಮಸ್ಯೆಗಳಿಗೆ ಇದರಲ್ಲಿ ಪರಿಹಾರವಿದೆ. ಗೀತೆಯಲ್ಲಿ ನಮ್ಮ ಜೀವನವನ್ನು ಸಮೃದ್ಧ ಮತ್ತು ಸುಂದರಗೊಳಿಸುವ ಶಕ್ತಿ ಹೊಂದಿದೆ. ಅದನ್ನು ಬಳಕೆಮಾಡಿಕೊಳ್ಳಬೇಕು ಎಂದು ಹೇಳಿದರು.

ದಂತ ವೈದ್ಯೆ ಡಾ.ಆಶಾ ಮಾತನಾಡಿ ನ್ಯೂಟನ ನಿಯಮವಾದ ಕ್ರಿಯೆಗೆ ತಕ್ಕ ಪ್ರತಿಕ್ರಿಯೆ ಎನ್ನುವ ಹಾಗೆ ಭಗವದ್ಗೀತೆ ಕರ್ಮ ಸಿದ್ಧಾಂತ ಪ್ರಧಾನವಾಗಿದ್ದು ನಾವು ಮಾಡುವ ಕೆಲಸಗಳ ಆಧಾರದ ಮೇಲಿಂದ ಫಲಿತಾಂಶ ನೀಡುತ್ತವೆ ಎಂದರು.

ಸಂಸ್ಥೆಯ ಅಧ್ಯಕ್ಷ ಮಹಾವೀರ ಸಗರಿ ಮಾತನಾಡಿ, ಕೇಳುವ ಭಾಗ್ಯ ಯಾರಲ್ಲಿ ಇದೆಯೋ ಅವರಲ್ಲಿ ಒಳ್ಳೆಯ ಗುಣಗಳು ಪ್ರವೇಶ ಮಾಡುತ್ತದೆ. ಕೆಲವಿಷ್ಟು ಬೇಡದೆ ಇರುವ ಅಂಶಗಳಿಗೆ ಅಲಿಪ್ತ ನೀತಿಯನ್ನು ಅನುಸರಿಸಬೇಕು. ಜೀವನದಲ್ಲಿ ಮೇಲೆ ಬರಲು ಒಳ್ಳೆಯ ಹವ್ಯಾಸವನ್ನು ರೂಢಿಸಿಕೊಳ್ಳಬೇಕು. ಎಲ್ಲಾ ಧರ್ಮದ ಸಾರ ಕರ್ಮ ಸಿದ್ಧಾಂತವೇ ಆಗಿದೆ. ವಿದ್ಯಾರ್ಥಿಗಳು ಆಸಕ್ತಿ ರೂಢಿಸಿಕೊಂಡು ಬದುಕನ್ನು ಹಸನಗೊಳಿಸಿಕೊಳ್ಳಬೇಕು. ನಮ್ಮ ಚಿಂತನೆಗಳು ಭಗವಂತನ ಕಡೆಗೆ ಸದಾ ಇರಬೇಕು. ವಿದ್ಯಾರ್ಥಿಗಳಿಗೆ ಶಾಲಾ ಹಂತದಿಂದಲೇ ಗೀತೆಯನ್ನು ಮನವರಿಕೆ ಮಾಡುತ್ತಿರುವ ಜ್ಞಾನ ಭಾರತಿ ವಿದ್ಯಾ ಮಂದಿರದ ವತಿಯಿಂದ ನಡೆಯುತ್ತಿರುವ ಅಭಿಯಾನದ ಕಾರ್ಯವನ್ನು ಶ್ಲಾಘಿಸಿದರು.

ಈ ವೇಳೆ ನಿವೃತ್ತ ಆರೋಗ್ಯ ಇಲಾಖೆ ನೌಕರ ಜೆ.ವಾಯ್. ಹೊಕ್ರಾಣಿ, ನಿವೃತ್ತ ಕೆ.ಇ.ಬಿ ಅಧಿಕಾರಿ ಎ.ಎಲ್.ದಾಸರ, ದಂತ ವೈದ್ಯೆ ಡಾ.ಆಶಾ, ಪ್ರಾಚಾರ್ಯ ವಿಪುಲ್ ಸಗರಿ, ಬಸವರಾಜ ಬಡಿಗೇರ, ಅಶೋಕ ಹಡಪದ, ಎಚ್.ಎಸ್. ಗೌಡರ್, ಜಿ.ಡಿ.ಬಡಿಗೇರ ಸೇರಿದಂತೆ ಇತರರು ಇದ್ದರು. ಜ್ಞಾನ ಭಾರತಿ ವಿದ್ಯಾ ಮಂದಿರದ ಗೀತ ಗಾಯನ ತಂಡದವರು ಗುರುಮಾತೆ ರಂಜಿತಾ ಹೆಗಡೆ ನೇತೃತ್ವದಲ್ಲಿ ಸಾಮೂಹಿಕವಾಗಿ ಭಗವದ್ಗೀತೆಯ 10ನೇ ಅಧ್ಯಾಯವನ್ನು ಪಠಿಸಿದರು.

ಉಪನ್ಯಾಸಕ ಜಿ.ಡಿ.ಬಡಿಗೇರ ಸ್ವಾಗತಿಸಿದರು. ಸಂಚಾಲಕ ರಾಮಚಂದ್ರ ಹೆಗಡೆ ಪ್ರಾಸ್ತಾವಿಕ ಮಾತನಾಡಿದರು. ಉಪನ್ಯಾಸಕ ರಾಜನಾರಾಯಣ ನಲವಡೆ ಹಾಗೂ ಬಸವರಾಜ ಬಡಿಗೇರ ನಿರೂಪಿಸಿದರು. ಅಶೋಕ ಹಡಪದ ವಂದಿಸಿದರು.

# ಉಪಾಧ್ಯಕ್ಷರಾಗಿ ಮೋಮಿನ ಅವಿರೋಧ ಆಯ್ಕೆ



**ಉದಯರಶ್ಮಿ ನ್ಯೂಸ್**

ವಿಜಯಪುರ: ವಿಜಾಪೂರ ಹಾಗೂ ಬಾಗಲಕೋಟ ಜಿಲ್ಲಾ ಆರೋಗ್ಯ ಇಲಾಖೆ ನೌಕರರ ಪತ್ತಿನ ಸಹಕಾರಿ ಸಂಘ ನಿಯಮಿತ, ವಿಜಯಪುರ ಇದರ ಈ ಮುಂಚೆ ಇದ್ದ ವಿನಾಯಕ ಅವದಿ ಉಪಾಧ್ಯಕ್ಷ ಸ್ಥಾನವು ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಡಿ.13 ರಂದು ನಾಮನಿರ್ದೇಶನ ಜರುಗಿದ್ದು, ಆಡಳಿತ ಮಂಡಳಿಯ ಎಲ್ಲ ಸದಸ್ಯರು ಹಾಗೂ ಅಧ್ಯಕ್ಷರ ಸಮ್ಮುಖದಲ್ಲಿ ಶ್ರೀ ಮೋಹಮ್ಮದಯಾಶೀನ ಕೆ. ಮೋಮಿನ ಇವರನ್ನು ಸಂಘದ ನೂತನ ಉಪಾಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಈ ಸಂದರ್ಭದಲ್ಲಿ ಅಧ್ಯಕ್ಷ ಡಾ. ಬಾಲಕೃಷ್ಣ ಕೆಳಗೇರಿ, ಸಂಘದ ಸದಸ್ಯರಾದ ಎಸ್.ಎಸ್. ಪಾಟೀಲ, ಅನೀಲ ಘೋರ್ಪಡೆ, ಎಸ್.ಓ.ಹಿರೇಕುರುಬರ, ಸಂತೋಷ ಯರಗಲ್, ಎಂ.ಎಸ್.ಬಾಗೇವಾಡಿ, ಶಂಕರ ತೋಡಕೆ, ಶ್ರೀಮತಿ ಕೆ.ಎಸ್. ಹಂಚಿನಾಳ, ಇನ್ನಿತರರು ಉಪಸ್ಥಿತ–ರಿದ್ದರು.

## ಪರಿಶಿಷ್ಟ ಜಾತಿ–ಪಂಗಡದ ಅಭ್ಯರ್ಥಿಗಳಿಗೆ ಅಪ್ರೆಂಟಿಶಿಪ್ ತರಬೇತಿ

# ಅರ್ಜಿ ಸಲ್ಲಿಸುವ ಅವಧಿ ಡಿ26ವರೆಗೆ ವಿಸ್ತರಣೆ

**ಉದಯರಶ್ಮಿ ನ್ಯೂಸ್**

ವಿಜಯಪುರ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿಯ ವಿಶೇಷ ಘಟಕ ಹಾಗೂ ಗಿರಿಜನ ಉಪಯೋಜನೆಯಡಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನದಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಪಡೆದ ಹಾಗೂ ಕಂಪ್ಯೂಟರ್ ಜ್ಞಾನಹೊಂದಿದ ಪರಿಶಿಷ್ಟ ಜಾತಿ–ಪ–ರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದ 12 ತಿಂಗಳ ಅಪ್ರೆಂಟಿಶಿಪ್ ತರಬೇತಿಗೆ ಅರ್ಜಿ ಸಲ್ಲಿಸುವ ಅವಧಿಯನ್ನು ಡಿಸೆಂಬರ್ 26ರವರೆಗೆ ವಿಸ್ತರಿಸಲಾಗಿದೆ.

ವಿಜಯಪುರ ಜಿಲ್ಲಾ ಕಚೇ–ರಿಯಲ್ಲಿ ತಲಾ ಒಂದು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ಅಪ್ರೆಂಟಿಶಿಪ್ ತರಬೇತಿಗೆ ಆಯ್ಕೆ ಮಾಡಲು ಅರ್ಜಿ ಆಹ್ವಾನಿಸಲಾಗಿದ್ದು, ತರಬೇತಿಗೆ ಮೆ–ರಿಟ್ ಹಾಗೂ ಸಂದರ್ಶನ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾಧ್ಯಮ ಅಕಾಡೆಮಿ ಮೂಲಕ ತರಬೇತಿ ಭತ್ಯೆ ನೀಡಲಾಗುವುದು.

ಅಪ್ರೆಂಟಿಶಿಪ್ ತರಬೇತಿಗೆ ಆಯ್ಕೆ ಬಯಸುವ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಯನ್ನು ಭರ್ತಿ ಮಾಡಿ ಅಗತ್ಯ ದಾಖಲೆಗಳೊಂದಿಗೆ ದಿನಾಂಕ :26–12–2023ರೊಳಗೆ ಸಹಾಯಕ ನಿರ್ದೇಶಕರ ಕಚೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರ ಆವರಣ, ಸ್ಟೇಶನ್ ರಸ್ತೆ, ವಿಜಯಪುರ ಕಚೇರಿಗೆ ಸಲ್ಲಿಸಬೇಕು. ನಿಗದಿತ ಅರ್ಜಿ ನಮೂನೆ ಹಾಗೂ ಈ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಚೇರಿಯನ್ನು ಸಂಪರ್ಕಿಸುವಂತೆ ಸಹಾಯಕ ನಿರ್ದೇಶಕ ಅಮರೇಶ ದೊಡಮನಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವ್ಯವಸ್ಥಿತವಾಗಿ ಪರೀಕ್ಷೆ ಜರುಗಿಸಲು ಅಪರ ಜಿಲ್ಲಾಧಿಕಾರಿ ಮಹಾದೇವ ಮುರಗಿ ಸೂಚನೆ

# ಡಿ.16–17 ರಂದು ಲೋಕಸೇವಾ ಆಯೋಗದ ಪರೀಕ್ಷೆ

**ಉದಯರಶ್ಮಿ ನ್ಯೂಸ್**




ವಿಜಯಪುರ: ಕರ್ನಾಟಕ ಲೋಕಸೇವಾ ಆಯೋಗದಿಂದ ಕರ್ನಾಟಕ ರಾಜ್ಯ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿನ ಕಿರಿಯ ಲೆಕ್ಕ ಸಹಾಯಕರ ಸಿ ಗ್ರೂಪ್ ಹುದ್ದೆಗಳ ನೇಮಕಾತಿಗೆ ಡಿ.16 ಹಾಗೂ 17 ರಂದು ವಿಜಯಪುರದ ಪರೀಕ್ಷಾ ಕೇಂದ್ರಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳು ಜರುಗಲಿದ್ದು, ಪರೀಕ್ಷೆಯಗಳು ವ್ಯವಸ್ಥಿತವಾಗಿ ಜರುಗುವಂತೆ ನೋಡಿಕೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿ ಮಹಾದೇವ ಮುರಗಿ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ಡಿ.16 ರಂದು ಸರ್ಕಾರಿ ಬಾಲಕರ ಪಿಯು ಕಾಲೇಜ್ ಪರೀಕ್ಷಾ ಕೇಂದ್ರದಲ್ಲಿ ಮಧ್ಯಾಹ್ನ 2 ರಿಂದ ಸಂಜೆ 4 ಗಂಟೆವರೆಗೆ ಜರುಗುವ ಕನ್ನಡ ಭಾಷಾ ಪರೀಕ್ಷೆಗೆ 59 ಅಭ್ಯರ್ಥಿಗಳು ಹಾಗೂ ಡಿ.17 ರಂದು ನಗರದ ಸರ್ಕಾರಿ ಬಾಲಕರ ಪಿಯು ಕಾಲೇಜ್, ಸರ್ಕಾರಿ ಬಾಲಕಿಯರ ಕಿರಿಯ ಪದವಿಪೂರ್ವ ಕಾಲೇಜ್ ಹಾಗೂ ಪಿಡಿಜೆ ಹೈಸ್ಕೂಲ್ ಪರೀಕ್ಷಾ ಕೇಂದ್ರಗಳಲ್ಲಿ ಬೆಳಿಗ್ಗೆ 10ರಿಂದ 11–30ರವರೆಗೆ ಪತ್ರಿಕೆ–1 ಸಾಮಾನ್ಯ ಜ್ಞಾನ, ಹಾಗೂ ಅಪರಾಹ್ನ 2 ರಿಂದ ಸಂಜೆ 4 ಗಂಟೆವರೆಗೆ ಜರುಗುವ ಪತ್ರಿಕೆ–2 ಸಾಮಾನ್ಯ ಕನ್ನಡ, ಇಂಗ್ಲೀಷ್, ಕಂಪ್ಯೂಟರ್ ಜ್ಞಾನ ಪರೀಕ್ಷೆಗೆ 227 ಅಭ್ಯರ್ಥಿಗಳು ನೊಂದಾಯಿಸಿಕೊಂಡಿದ್ದಾರೆ.

ಪರೀಕ್ಷೆಗೆ ನಿಯೋಜಿತ ಅಧಿಕಾರಿಗಳು ವ್ಯವಸ್ಥಿತವಾಗಿ ಕಾರ್ಯನಿರ್ವಹಿಸಬೇಕು. ಪರೀಕ್ಷೆಗೆ ಸಂಬಂಧಿಸಿದ ಸಾಮಗ್ರಿಗಳನ್ನು ಜಿಲ್ಲಾ ಖಜಾನೆಯಿಂದ ನಿಗದಿತ ಪರೀಕ್ಷಾ ಕೇಂದ್ರಗಳಿಗೆ ರವಾನೆ, ಪರೀಕ್ಷಾ ಕೇಂದ್ರದಲ್ಲಿನ ಅಗತ್ಯ ಸಿದ್ಧತೆ ಕು–ರಿತು ಪರಿಶೀಲನೆ ನಡೆಸಬೇಕು. ಪರೀಕ್ಷಾರ್ಥಿಗಳಿಗೆ ಸೂಕ್ತ ಆಸನ ವ್ಯವಸ್ಥೆ ಕೈಗೊಳ್ಳಬೇಕು. ಮೇಲ್ವಿಚಾರಕರು ಸೇರಿದಂತೆ ಪರೀಕ್ಷೆಗೆ ನಿಯೋಜಿತ ಅಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು. ಯಾವುದೇ ಲೋಪವಾಗದಂತೆ ಎಚ್ಚರಿಕೆ ವಹಿಸಬೇಕು.

ಸಭೆಯಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಎನ್.ಎಚ್.ನಾಗೂರ, ಶಿಕ್ಷಣಾಧಿಕಾರಿ ಅಶೋಕ ಲಿಮಕರ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಈರಣ್ಣ ಆಶಾಪುರ, ಜಿಲ್ಲಾ ಖಜಾನೆ ಇಲಾಖೆ ಉಪನಿರ್ದೇಶಕ ಹಣಮಂತ ಕಾಲತಿಪ್ಪಿ ಸೇರಿದಂತೆ ಪರೀಕ್ಷೆಗೆ ನಿಯೋಜಿತ ಅಧಿಕಾರಿಗಳು ಉಪಸ್ಥಿತರಿದ್ದರು.

# "ಭಾಳ ಸಂಭಾಯಿತ ಪ್ರಾಣಿ ಅದಿನಿ ನಾ"

**ಉದಯರಶ್ಮಿ ದಿನಪತ್ರಿಕೆ**





– ಶ್ರೀನಿವಾಸ ಜಾಲವಾದಿ, ಸುರಪುರ

'ಬಾರಯ್ಯ ಗುಂಡಯ್ಯ, ಈಗಿನ ಬಾತ್ಮಿ ಬೋಲ' ಅಂತ ಬಾಶಾ ಕರೆದ

'ಏನು ಬಾತ್ಮಿನೋ ಏನೊ, ಎಲ್ಲಾ ಬರೇ ನೋಟಿಂದೇ ಸುದ್ದಿ ಆಗೇತಿ' ಅಂದ ಗುಂಡ್ಯಾ

'ಏನಲೇ ತಮ್ಮಾ ಅದು? ನೋಟು ಪ್ರಿಂಟ ಮಾಡೂ ಮಶೀನ ಕೊಟ್ಟಾರೇನು ಎಲ್ಲಾರಿಗೆ?' ಅಂದ ಕಾಕಾ

'ಏ ಇಲ್ಲೋ ಯಪ್ಪಾ ತಂದೆ, ಒಬ್ಬಂವಾ ಸಾಹು ಅಂತ ಎಂಪಿ ಮನ್ಯಾಗ 300 ಕೋಟಿಕ್ಕಿಂತ ಹೆಚ್ಚಿಗಿ ಸಿಕ್ಕಾವಂತ ರೊಕ್ಕಾ' ಅಂದಳು ರಾಣಿ

'ಯಾರಿಗಿ?' ಅಂದ ಶೌರಿ

'ಅದೇ, ಮತ್ಯಾರಿಗಿ ಇಡಿ ಅವರಿಗಿ' ಅಂದ ಗುಡುಮ್ಯಾ



'ಹಂಗಾರ ನಾವು ಅಲ್ಲಿಗೆ ಹೋಗಿ ಒಂದೀಟು ಬಳಕೊಂಡ ಬರಾಮೇನು?' ಕೇಳಿದ ಆಸೆಯಿಂದ ರಬಡ್ಯಾ

'ಅಲ್ಲಿ ಹ್ವಾದೆಂಧ್ರ, ನಿನ್ನೂ ಒಳಗ ಹಾಕ್ಕಾರು' ಅಂತ ಬೆದರಿಕೆ ಹಾಕಿದ ಗುಂಡ್ಯಾ

'ಏ, ನಾವೇನ ತಪ್ಪ ಮಾಡೇವಿ ಅಂತ ಒಳಗ ಹಾಕ್ತಾರ?' ಅಂತಂದ ರಬಡ್ಯಾ

'ಏನಪಾ ತಿಳ್ಕ ನೀ, ಏನರೇ ತಪ್ಪ ಮಾಡಿದ್ರ ಅಷ್ಟ ಒಳಗ ಹಾಕಬೇಕಂತ ಏನಿಲ್ಲಾ' ಅಂತ ನಕ್ಕ ಗುಂಡ್ಯಾ

'ಹಂಗಾರ ಈಗ ಒಳಗ ಇದ್ದವ್ರು ತಪ್ಪ ಮಾಡೇ ಇಲ್ಲೇನ?' ಅಂದಳು ರಾಶಿ

'ಅವರು ಸ್ವಲ್ಪ ಮಾಡಿರ್ತಾರು, ಅವ್ರಿಕ್ಕಿಂತ ಹೆಚ್ಚ ಹೊರಗಿದ್ದವರು ಮಾಡಿರ್ತಾರು, ಮತ್ತ ಹಂಗೇ ಅವರು ರಾಜಾರೋಷವಾಗಿ ಅಡ್ಡಾಡ್ತಾರು' ಅಂತ ವ್ಯಂಗ ನಗೆ ನಕ್ಕ ಗುಡುಮ್ಯಾ

'ಇದರಾಗೂ ಪಾಯಿಂಟ ಐತಿ ಬಿಡು' ಅಂದ ಕಾಕಾ

' ಮತ್ತೇನಪಾ ವಿಜಾಪುರದ ಹಿಂಹುಲಿ ಭಾರಿ ಗುಡಗೇತಿ ಅಪ್ಪ ಮಗನ ಮ್ಯಾಲ?' ಅಂತ ಕೇಳಿದ ಶೌರಿ

'ಓ ಸಾಮ್ರಾಟ ಕೋ ಬಿಟ್ಟೈತಿ, ಬಾಪ್ ಬೇಟಾ ಕೋ ಗಾಲೇ ದೇತೇ ಹೀ ರಹೆ ಹೈ' ಅಂತಂದ ಬಾಶಾ

'ಅದೇ ಸಾಮ್ರಾಟಗ ಸಹಕಾರ ನೀಡತಿನಿ, ಆದ್ರ ಈ ಅಪ್ಪ ಮಗಂದು ಎಲ್ಲಾ ಬಟಾ ಬಯಲ ಮಾಡತಿನಿ ಅಂದ್ಯೆತಿ' ಅಂದಳು ರಾಣಿ

' ಸೋಮಣ್ಣಾ ಭೀ ನೊಂದ ಜೀವಿ ಹೈ ನನ್ನ ಗತ್ಲೆ ಅಂತ ಹೇಳೇತಿ ಹಿಂಹುಲಿ' ಅಂದ ಬಾಶಾ

'ಅಲ್ಲಪಾ ಆ ಜಮೀರದೇನ ಸುದ್ದಿ? ಏನೋ ಗದ್ಲಾ ಎಬ್ಬಸ್ಯಾನಲಾ?' ಅಂದ ಕಾಕಾ

'ಸ್ಪೀಕರ ಖಾದರ ಅವರಿಗಿ ಡೊಗ್ಗಿ ಸಲಾಂ ಹೊಡ್ಯಾಕಬೇಕು ಈ ಕಮಲದವರು'ಅಂತ ಡೈಲಾಗ್ ಹೊಡದೇತಿ' ಅಂತ ಅಂದಳು ರಾಶಿ

'ಈಗ ಸದನದ ಬಾವಿಗಿಳದಾರ ಕಮಲ ಕಲಿಗಳು ಈಗೇನಂತಾನು'? ಅಂತ ಕೇಳಿದ ಗುಡುಮ್ಯಾ

'ನಾ ಹಂಗ ಅಂದಿಲ್ಲಾ,ನಾ ಏನೂ ಕ್ಷಮಾ ಕೇಳಂಗಿಲ್ಲ ರಾಜಿನಾಮೆನೂ ಕೊಡಂಗಿಲ್ಲ, ನಾ ಭಾಳ ಮುಗ್ದ ಅದೀನಿ, ನನ್ನ ನಂಬ್ರಿ ಅಂತ ಅಂ–ದಾನು' ಅಂತ ಅಂದಳು ರಾಣಿ

'ಇದಕ್ಕ ಟಗರ ಏನಂತತಿ?' ಕೇಳಿದ ಕಾಕಾ

'ಏ ಅಂವಾ ದೇವ್ರಂಥಾ ಮನಶ್ಯಾ ಅದಾನ, ಅವಗ ತ್ರಾಸು ಕೊಡಬ್ಯಾಡ್ರಿ, ಅಂವಗ ತ್ರಾಸ ಕೊಟ್ಟರ ನೀವು ತೆಲಂಗಾಣದಾಗ ತರಗಲೆ ಆದ–'ಂಗ ಆಕ್ಕಿರಿ ನೋಡ್ರಿ ಅಂತ ತನ್ನದೇ ಸ್ಟೈಲ್ದಾಗ ಠೇಂಕಾರ ಮಾಡೇತಿ ಟಗರು' ಅಂತ ನಕ್ಕಳು ರಾಶಿ





'ಇಲ್ಲಿ ಯಾರು ಯಾರ ಪಾಲಿಗೆ ಯಾವಾಗ ದೇವ್ರ ಆಕ್ಕಾರೋ ದೆವ್ವ ಆಕ್ಕಾರೋ ಒಂದು ಗೊತ್ತಾಗಂಗಿಲ್ಲ ನೋಡಪಾ' ಅಂತಂದ ಕಾಕಾ

'ಅದ್ಕ, ಇದನ್ನು ರಾಜಕೀಯ ಅರ್ಥಾತ್ ಪಾಲಿಟಿಕ್ಸ್ ಅಂತ ಕ–ರಿತಾರ ಕಾಕಾ' ಅಂತ ನಕ್ಕ ಶೌರಿ

'ಇಂಡಿಯಾ'ದ್ದು ಏನು ಕಥಿ?' ಕೇಳಿದ ಗುಂಡ್ಯಾ

'ಮಮತಾ ದೀದಿ ಒಂದ ಕಡೆ, ಅಖಿಲೇಶ ಒಂದು ಕಡೆ, ನಿತೀಶ ಒಂದು ಕಡೆ ಮುಖ ತಿರಕೊಂಡ ಅಡ್ಡಾಡಕತ್ತಾರು' ಅಂದ ರಬಡ್ಯಾ

'ಮತ್ತ ನಮೋ □□□ಂಡ್ ಶಾಣ್ಯಾ?' ಕೇಳಿದಳು ರಾಶಿ

'ಈಗ ಜನೇವರಿ 22ಕ್ಕ ರಾಮಲಲ್ಲಾನ್ನ ಜಾಗಾದ ಮ್ಯಾಗ ಕೂಡಿಸಿ, ಛಬ್ಬೀಸ್ ಜನೇವರಿಗಿ ಕೆಂಪುಕೋಟೆ ಮ್ಯಾಗ ನಿಂತು, ಅದನ್ನ ಸಾರಿ ಸಾರಿ ಹೇಳಿ, ಮಾರ್ಚದಾಗ ಎಂಪಿ ಎಲೆಕ್ಷನ್ ಡಿಕ್ಲೇರ್ ಮಾಡಿ, ಬೌನ್ಸರ್ ಎಸ್ದ ಕುಂತ ಬಿಡ್ತಾರ ನೋಡು, ಇಧ ಅವರ್ದು ಪ್ಲಾನ್ ಐತಿ' ಅಂತ ಜೋರದಾರ ನಕ್ಕ ಶೌರಿ



'ಅಲ್ಲಲೇ ನಿನ್ನ ಜೋಡಿ ಫೋನ್ನಾಗ ಮಾತಾಡಿ ಇದೆಲ್ಲಾ ಡಿಟೇಲ್ಸ್ ಹೇಳ್ಯಾರೇನು?' ಅಂತ ಆಶ್ಚರ್ಯದಿಂದ ಕೇಳಿದ ಗುಡುಮ್ಯಾ

'ಏನ ಮಳ್ಳ ಅದಿಯಲೇ ನೀ, ಇದು ಛಂದಂಗೆ ಕನ್ನಡಿ ಮ್ಯಾಲ ಬರದಂಗೆ ಐತಿ, ಇಷ್ಟೂ ತಿಳೆಂಗಿಲ್ಲೇನ ನಿನ್ಗ ?' ಅಂದ ಶೌರಿ

'ಅಷ್ಟ ತಿಳಿದವರು ಇಲ್ಲಿ ಅಸೆಂಬ್ಲೆಗ ಯಾಕ ಬಕ್ಕ ಬಾರಲೇ ಬಿದ್ರು?' ವ್ಯಂಗವಾಗಿ ನಕ್ಕು ಕೇಳಿದ ರಬಡ್ಯಾ

'ಅಲ್ಲಿ ಜೋಲಿ ಹೋಗಿತ್ತ ಹೀಂಗ, ಈ 'ಅಸಂತೋಸ'ದಂತಾವ್ರ ಮಾತ ಕೇಳಿ, ಆದ್ರ ಈಗ ಅವರಿಗೂ ಗೊತ್ತಾಗೇತಿ, ಎಲ್ಲಿ ಗುರಿ ಇಟ್ಟು ಹೊಡಿಬೇಕಂತ ಹೇಳಿ' ಅಂದ ಕಾಕಾ

'ಆದ್ರ ಈ ಎಂಪಿ ತಯಾರಿಗಿ



ಸಿಟ್ಟೂರಿ 'ಯುವರಾಜ'ಗ ಪಟ್ಟಗಟ್ಟಿದ್ರ, ಇಲ್ಲೂ ರಗಡ ಮಗ್ಗಲ ಮುಳ್ಳ ಅದಾವಲಾ ಇಲ್ಲಿ ಕರುನಾಡಿನಾಗ?' ಅಂದಳು ರಾಶಿ

'ಅವು ಇರುವೇಯೆಳು, ಯಾರ್ನ ಮಾಡಿದ್ರೂನು ಇನ್ನೊಂದ ವಿರುದ್ಧ ಟೀಂ ಕತ್ತಿ ಮಸದೇ ಮಸಿತೈತಿ' ಅಂದ ಶೌರಿ

'ನಮೋ ಶಾಣ್ಯಾ'ರ ಲಕ್ಷ್ಯ ಈಗ ಹಿಂದಿ ರಾಜ್ಯದ ಕಡೆ ಐತಿ, ಅಲ್ಲಿ ಸೀಟು ಜಾಸ್ತಿ ಅದಾವು' ಅಂದ ಗುಡುಮ್ಯಾ

'ಈ ಕಡಿ ದಕ್ಷಿಣದ್ದು ಸುಮ್ಕ ಲಕ್ಕಿ ಡ್ರಾ ಅಂತ ತಿಳಿದಾರೇನು?' ಕೇಳಿದಳು ರಾಶಿ

'ಹಂಗೇ ಅನ್ನೋ, ಆ ಕಡೆವು ಬಾಚಗೊಂಡ್ರ ಆತು ಮತ್ತ ಶುರು ಭಾಯಿಯೋ ಬೆಹನೋ ಅಂತ' ಅಂದು ನಕ್ಕಳು ರಾಣಿ

'ಎಲ್ಲಾ ಹದಗೆಟ್ಟ ಹೈದ್ರಾಬಾದ್ ಆಗೇತವಾ' ಅಂತಂದ ಕಾಕಾ

'ಇಲ್ಲಾ ಸೈಕೋನ್ ಸುರ್ದು ಎಕ್ಕುಟ್ಟಿ ಹೋತಲಾ ಚೆನ್ನೈ ಹಂಗಾಗೇತಿ' ಅಂದ ಶೌರಿ

'ಇರಲಿ, ನಮ್ಮ ಪ್ರೀತಿಯ ಕಲಾವಿದೆ ಲೀಲಾವತಿ ಅವರು ಮರಣಿಸಿದರು, ಅವರಿಗೆ ನಮ್ಮ ಭಕ್ತಿ ಪೂರ್ವಕ ಶ್ರದ್ಧಾಂಜಲಿ ಸಲ್ಲಬೇಕು' ಅಂದಳು ರಾಣಿ

'ಹೌದು, ಚಿತ್ರರಂಗದ ತಾಯಿ ಅಮ್ಮಾ ಆಕೆ' ಅಂದ ಶೌರಿ

' 600 ಸಿನೇಮಾದಾಗ ನಟಿಸ್ಯಾಳ ಲೀಲಾವತಿ, ಅದು ಸಣ್ಣ ಮಾತಲ್ಲ' ಅಂದ ಗುಂಡ್ಯಾ

'ಅಷ್ಟ ಅಲ್ಲ, ಲೀಲಾವತಿ ಅಮ್ಮ ಮತ್ತ ಅವರ ಮಗ ಕೂಡಿ ನೆಲಮಂಗಲ ಹತ್ರ ಕೃಷಿ ಮಾಡ್ಕೊಂಡ ಇದ್ರು, ತೋಟ ಮಾಡ್ಯಾರ, ಅಲ್ಲಿ ಹಳ್ಳಿ ಜನರಿಗೆ ಅನುಕೂಲ ಆಗ್ಲಿ ಅಂತ ದವಾಖಾನಿ ಕಟ್ಟಿಸ್ಯಾರು, ದನ ಕರ ಕುರಿಗೋಳ ಸಲಾಗಿನೂ ಪಶು ಆಸ್ಪತ್ರೆ ಕಟ್ಟಿಸಿ ಕೊಟ್ಟಾರ ಸ್ವಂತ ಖರ್ಚಿನ್ಯಾಗ' ಅಂದಳು ರಾಶಿ

'ಎಂಥಾ ಮಾತೃಹೃದಯ ನೋಡು ಈ ಭಕ್ತ ಕುಂಬಾರನ ಸತಿದು' ಅಂತ ಕಣ್ಣಿರು ಮಿಡಿದಳು ರಾಣಿ

'ಇಂಥವ್ರು ಇನಾ ಅದಾರಂತನ ಮಳಿ ಬೆಳಿ ಅಕ್ಕಾವು ನೋಡು' ಅಂದ ಕಾಕಾ

'ಇಷ್ಟೆಲ್ಲಾ ಸಾಧನೆ ಮಾಡಿದ ಲೀಲಮ್ಮಗ ಪದ್ಮಶ್ರೀ ಅವಾರ್ಡ ಸಿಗಬೇಕಾಗಿತ್ತು ನೋಡು' ಅಂತಂದಳು ರಾಶಿ

'ಎಲ್ಲಿ ಸಿಗ್ತಾವ ಸಾಧಕರಿಗೆ? ಎಲ್ಲಾ ಕಡೆ ಈಗ ನಕಲಿ ಗ್ಯಾಂಗೇ ತುಂಬೈತಿ' ಅಂತ ಬೇಸರಿಸಿದ ಕಾಕಾ

'ಈಗ ಈ ನಾಯಿಕೊಡೆ ಗತ್ಲೆ ಸಂಘಗಳು ಹುಟಕೊಂಡಾವು, ಬರ್ರಿ ಬರ್ರಿ ತಗಿರಿ ತಗಿರಿ ನೋಟು, ತಗೋರಿ ತಗೋರಿ ಪ್ರಶಸ್ತಿ ಗಿಶಸ್ತಿ ಅಂತ ಕೂಗಿ ಕೂಗಿ ಕರೆಕತ್ಯಾವು' ಎಂದು ನಕ್ಕ ರಬಡ್ಯಾ

'ಏ ಈಗ ಸ್ವಂತ ಶಾಲು ಹಾರಾ ಕೊಟ್ಟು ಸ್ವಯಂ ಸನ್ಮಾನ ಮಾಡಿಸ್ಗೊಂಡು ಆ ಫೋಟೋ ಫೇಸ್ಬುಕ್ಯಾಗ, ವ್ಯಾಟ್ಸಾಪಿನಾಗ ಹಾಕ್ಕೊಂಡು ಖುಷಿ ಪಡ್ತಾರ, ಮತ್ತ ಪೇಪರನಾಗ, ಟಿವ್ಯಾಗ ಬರೂ ಹಂಗ ನೋಡ್ಕೊಂತಾರ ಮಹಾನ್ ಸುಳ್ಳು ಸಾಧಕರು' ಅಂತ ರಾಣಿ ಬೈದಳು

'ಲೀಲಮ್ಮಗ ಕೆಲವು ಮಂದಿಯಿಂದ ಅನ್ಯಾಯ ಆತು, ಕೊನೆಗೂ ಅದ್ನ ಸರಿಪಡಿಸಲಿಕ್ಕಿ ಆಗಲೇ ಇಲ್ಲ, ಆ ಹಿರಿಯ ಜೀವ ಹಂಗೇ ಮರುಗಿ ಹೋಯ್ತು' ಅಂದಳು ರಾಶಿ

'ಹೌದು ಲೀಲಾವತಿ ಅವರ ಬಾಳಿನಲ್ಲಿ ಅದೊಂದು ಹಾಂಗೇ ಉಳಿತು ನೋಡು' ಎಂದ ಗುಡುಮ್ಯಾ

'ಸರಿ ಎಲ್ಲಾರೂ ಸೇರಿ ಇಂಥಾ ಮಹಾನ್ ತಾಯಿಗಿ ನಮಸ್ಕಾರ ಮಾಡುಣ ಬರ್ರಿ 'ಅಂತ ಎಲ್ಲಾರನ್ನು ಕರಕೊಂಡ ಹೊಂಟಳು ರಾಣಿ ತಾಯಿ ಸಮಾಧಿ ಕಡೆಗೆ

# ಔತಣಕೂಟದಲ್ಲಿ ಸೋಮಶೇಖರ್, ಹೆಬ್ಬಾರ್ ಭಾಗಿ :ಡಿಕೆಶಿ ಸ್ಪಷ್ಟನೆ

ಉದಯರಶ್ಮಿ ನ್ಯೂಸ್



ವಿಜಯಪುರ: ಬಿಜೆಪಿ ಶಾಸಕರಾದ ಎಸ್.ಟಿ ಸೋಮಶೇಖರ್ ಮತ್ತು ಶಿವರಾಂ ಹೆಬ್ಬಾರ್ ಅವರು ನಿನ್ನೆ ರಾತ್ರಿ ಕಾಂಗ್ರೆಸ್ ಪಕ್ಷದ ಸಭೆಗೆ ಬಂದಿಲ್ಲ. ನಾವು ಆಹ್ವಾನ ನೀಡಿದ್ದ ಔತಣ–ಕೂಟಕ್ಕೆ ಬಂದಿದ್ದರು" ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಇಂದು(ಡಿ.14) ಬೆಳಗಾವಿಯ ಸುವರ್ಣಸೌಧದಲ್ಲಿ "ಇತರೆ ಪಕ್ಷದವರು ಕಾಂಗ್ರೆಸ್ ಔತಣಕೂಟಕ್ಕೆ ಬಂದಿದ್ದರೇ? ಎಂಬ ಮಾಧ್ಯಮಗಳ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಡಿಕೆಶಿ "ಹೌದು, ವಿಶ್ವನಾಥ್ ಸೇರಿದಂತೆ ಅನ್ಯ ಪಕ್ಷದ 10 ಶಾಸಕರು ಉಪಹಾರ ಕೂಟಕ್ಕೆ ಬಂದಿದ್ದರು" ಎಂದಿದ್ದಾರೆ.

ಅನ್ಯ ಪಕ್ಷದ ಶಾಸಕರು ಸಿಎಲ್‌ಪಿ ಸಭೆಗೆ ಬಂದಿದ್ದರೇ ಎಂದು ಕೇಳಿದ್ದಕ್ಕೆ "ಅವರು ನಮ್ಮ ಶಾಸಕಾಂಗ ಪಕ್ಷದ ಸಭೆಗೆ ಯಾಕೆ ಬರುತ್ತಾರೆ?. ಅವರು ನಮ್ಮ ಪಕ್ಷದ ಶಾಸಕರಲ್ಲ. ಹೀಗಾಗಿ ಶಾಸಕಾಂಗ ಪಕ್ಷದ ಸಭೆಗೆ ಬಂದಿಲ್ಲ" ಎಂದು ತಿಳಿಸಿದರು.

ನಿಮ್ಮ ಮೇಲಿರುವ ಸಿಬಿಐ ತನಿಖೆ ಹಿಂಪಡೆದ ವಿಚಾರವನ್ನು ಬಿಜೆಪಿ ಸದನದಲ್ಲಿ ಪ್ರಸ್ತಾವನೆ ಮಾಡಲು ತಯಾರಿ ನಡೆಸಿದೆ ಎಂದು ಕೇಳಿದ್ದಕ್ಕೆ "ಪ್ರಸ್ತಾವನೆ ಮಾಡಲಿ, ಕಾನೂನಿದೆ. ಬೇಡ ಎಂದವರು ಯಾರು? ಎಂದು ಕೇಳಿದರು.

ಎಸ್.ಟಿ ಸೋಮಶೇಖರ್ ಮತ್ತು ಶಿವರಾಂ ಹೆಬ್ಬಾರ್ ಕಾಂಗ್ರೆಸ್ ಔತಣ–ಕೂಟಕ್ಕೆ ತೆರಳಿದ್ದ ಬಗ್ಗೆ ಪ್ರತಿಕ್ರಿಯಿಸಿದ ವಿಪಕ್ಷ ನಾಯಕರ ಆರ್. ಅಶೋಕ್, ಕಾಂಗ್ರೆಸ್‌ನ ಆಹ್ವಾನದ ಮೇರೆಗೆ ಔತಣ ಕೂಟಕ್ಕೆ ಹೋಗಿದ್ದೇವೆ ಎಂದು ಎಸ್.ಟಿ ಸೋಮಶೇಖರ್ ನನ್ನ ಬಳಿ ಹೇಳಿದ್ದಾರೆ. ಅವರು ಪಕ್ಷದ ಯಾವುದೇ ಶಿಸ್ತು ಉಲ್ಲಂಘನೆ ಮಾಡಿಲ್ಲ. ನಿನ್ನೆಯ ಬಿಜೆಪಿ ಧರಣಿಯಲ್ಲೂ ಅವರಿದ್ದರು. ನಾನು ಕರೆದು ಮಾತನಾಡುತ್ತೇನೆ ಎಂದು ಹೇಳಿದ್ದಾರೆ.

### ಲೋಕಸಭಾ ಕಲಾಪದಲ್ಲಿ ಭದ್ರತೆ ಲೋಪ ಕುರಿತು ಗದ್ದಲ ಪ್ರಕರಣ

# ಲೋಕಸಭೆ–ರಾಜ್ಯಸಭೆ: 16 ಸಂಸದರು ಅಮಾನತು



ಹೊಸದಿಲ್ಲಿ: ಲೋಕಸಭೆಯಲ್ಲಿ ಬುಧವಾರ ಉಂಟಾದ ಭದ್ರತಾ ಲೋಪದ ವಿಚಾರವಾಗಿ ಗುರುವಾರ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಭಾರಿ ಗದ್ದಲ ಉಂಟಾಗಿದ್ದು, ಈ ವೇಳೆ ಎರಡೂ ಸದನಗಳಿಂದ ಒಟ್ಟು 16 ಮಂದಿ ಸಂಸದರನ್ನು ಅಮಾನತು ಮಾಡಲಾಗಿದೆ.

ಲೋಕಸಭೆಯಲ್ಲಿ ಉಂಟಾದ ಭದ್ರತಾ ಲೋಕದ ಕುರಿತು ಸದನದ ಬಾವಿಗಿಳಿದು ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಸಂಸದರಾದ ಜ್ಯೋತಿಮಣಿ, ಹೈಬಿ ಇಡೆನ್, ಡೀನ್ ಕುರಿಯಾಕೋಸ್, ಪ್ರತಾಪನ್ ಮತ್ತು ರಮ್ಯಾ ಹ–ರಿದಾಸ್ ಅವರನ್ನು ಚಳಿಗಾಲದ ಅಧಿವೇಶನ ಮುಗಿಯುವವರೆಗೂ ಕಲಾಪಕ್ಕೆ ಹಾಜರಾಗದಂತೆ ಮೊದಲು ಅಮಾನತು ಮಾಡಲಾಗಿದೆ.

ಡಿಎಂಕೆ ಸಂಸದೆ ಕನಿಮೊಳಿ, ಕಾಂಗ್ರೆಸ್ ಸಂಸದ ಮಣಿಕವ್ ಟಾಗೋರ್, ಬೆನ್ನಿ ಬೆಹನಾನ್, ವಿಕೆ ಶ್ರೀಕಂಡನ್, ಮೊಹಮದ್ ಜಾವೇದ್, ಪಿಆರ್ ನಟರಾಜನ್, ಕೆ ಸುಬ್ರಮಣ್ಯಂ, ಎಸ್‌ಆರ್ ಪಾರ್ತಿಬನ್, ಎಸ್ ವೆಂಕಟೇಶನ್ ಅವರನ್ನು ಲೋಕಸಭೆಯಿಂದ ಅಮಾನತು ಮಾಡಲಾಗಿದೆ. ಅಲ್ಲದೇ ರಾಜ್ಯಸಭೆ ಅಧ್ಯಕ್ಷರ ಜೊತೆಗೆ ತೀವ್ರ ವಾಕ್ಸಮರ ನಡೆಸಿದ ತೃಣಮೂಲ ಕಾಂಗ್ರೆಸ್ ಸಂಸದ ಡೆರೆಕ್ ಓಬ್ರಿಯನ್ ಅವರನ್ನು 'ಅನುಚಿತ ವರ್ತನೆ' ಕಾರಣದಿಂದ ಅಮಾನತು ಮಾಡಲಾಗಿದೆ.

ಗುರುವಾರ ರಾಜ್ಯಸಭೆಯ ಕಲಾಪ ಆರಂಭವಾಗುತ್ತಿದ್ದಂತೆಯೇ ಪ್ರತಿಪಕ್ಷಗಳ ಸಂಸದರು ಸದನದ ಬಾವಿಗೆ ಇಳಿದು ಪ್ರತಿಭಟನೆ ನಡೆಸಿದರು. ಈ ವೇಳೆ ಭದ್ರತಾ ಲೋಪದ ಕುರಿತು ಚರ್ಚೆಗೆ ಪಟ್ಟು ಹಿಡಿದರು. ಭದ್ರತಾ ವೈಫಲ್ಯದ ಕುರಿತು ಚರ್ಚಿಸಲು ಉಳಿದ ಕಲಾಪವನ್ನು ಅಮಾನತುಗೊಳಿಸುವಂತೆ ವಿಪಕ್ಷ ಸಂಸದರು 28 ನೋಟಿಸ್‌ಗಳನ್ನು ಮಂಡಿಸಿದರು. ಈ ನೋಟಿಸ್‌ಗಳನ್ನು ಅಧ್ಯಕ್ಷ ಜಗದೀಪ್ ಧನಕರ್ ತಿರಸ್ಕ–ರಿಸಿದರು. ಹೀಗಾಗಿ ಇದರಿಂದ ಕೋಪಗೊಂಡ ವಿಪಕ್ಷ ಸದಸ್ಯರು ಸದನದ ಬಾವಿಗೆ ಇಳಿದು ಧರಣಿ ನಡೆಸಿದರು. ಸಂಸದರ 'ಅನುಚಿತ ನಡವಳಿಕೆ'ಯನ್ನು ಖಂಡಿಸಿದ ಧನಕರ್, ಇದು ಸದನದ ನಿಯಮಾವಳಿಗಳ ಉಲ್ಲಂಘನೆಯಾಗಿದೆ ಎಂದು ಕಿಡಿಕಾ–ರಿದರು.

ಡೆರೆಕ್ ಓಬ್ರಿಯನ್ ಅವರು ಈ ಕೂಡಲೇ ಸದನವನ್ನು ತೊರೆಯಬೇಕು ಎಂದು ಸೂಚಿಸಲಾಗಿದೆ. ಅಧ್ಯಕ್ಷ ಸ್ಥಾನವನ್ನು ತಿರಸ್ಕರಿಸುವುದಾಗಿ ಡೆರೆಕ್ ಓಬ್ರಿಯನ್ ಹೇಳುತ್ತಾರೆ. ನಿಯಮಗಳನ್ನು ತಾವು ಗೌರವಿಸುವುದಿಲ್ಲ ಎಂದು ಡೆರೆಕ್ ಓಬ್ರಿಯನ್ ಹೇಳುತ್ತಾರೆ. ಇದು ಗಂಭೀರ ದುರ್ವರ್ತನೆ. ಇದು ನಾಚಿಕೆಗೇಡಿನ ಘಟನೆ ಎಂದು ಧನಕರ್ ಕಿಡಿಕಾರಿದರು. ಎಚ್ಚರಿಕೆ ನಡುವೆಯೂ ಓಬ್ರಿಯನ್ ಹಾಗೂ ಇತರೆ ವಿಪಕ್ಷ ಸಂಸದರು ಪ್ರತಿಭಟನೆ ಮುಂದುವರಿಸಿದರು. ಬುಧವಾರ ಘಟನೆ ಬಗ್ಗೆ ಅಮಿತ್ ಶಾ ಅವರು ಸದನಕ್ಕೆ ಹಾಜರಾಗಿ ಉತ್ತರ ನೀಡಬೇಕು ಎಂದು ಒತ್ತಾಯಿಸಿದರು.

### ಎಣ್ಣೆ ಅಂಗಡಿ ಮುಂದೆ ಆಸ್ಪತ್ರೆ & ವಿಶ್ರಾಂತಿ ಭವನಕ್ಕೆ ಆಗ್ರಹ । ಕುಡುಕ ಪದಬಳಕೆ ನಿಷೇಧಕ್ಕೆ ಒತ್ತಾಯ

# ಮದ್ಯಪಾನ ಪ್ರಿಯರ ಹೋರಾಟ ಸಂಘದಿಂದ ಪ್ರತಿಭಟನೆ

ಉದಯರಶ್ಮಿ ನ್ಯೂಸ್




ಬೆಳಗಾವಿ: ಸುವರ್ಣಸೌಧದಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ವಿಚಿತ್ರ ವಿಭಿನ್ನ ಹೋರಾಟ ನಡೆಯುತ್ತಿದೆ. ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ಕರ್ನಾಟಕ ಮದ್ಯಪಾನ ಪ್ರಿಯರ ಹೋರಾಟ ಸಂಘದಿಂದ ಪ್ರತಿಭಟನೆ ನಡೆಸಿದ್ದು, ತಮ್ಮ ಬೇಡಿಕೆಗಳನ್ನು ಅವರು ಮುಂದಿಟ್ಟಿದ್ದಾರೆ.

ಈ ಮದ್ಯಪಾನ ಪ್ರಿಯರ ಬೇಡಿಕೆಗೆ ಪಟ್ಟು ಹಿಡಿದು ಪ್ರತಿಭಟನೆ ನಡೆಸುತ್ತಿದ್ದ ಸ್ಥಳಕ್ಕೆ ಸಚಿವ ಸಂತೋಷ ಲಾಡ್ ಭೇಟಿ ನೀಡಿ, ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ಕರ್ನಾಟಕ ಮದ್ಯಪಾನ ಪ್ರಿಯರ ಹೋರಾಟ ಸಂಘದಿಂದ ಪ್ರತಿಭಟನೆ ಮದ್ಯಪಾನ ಪ್ರಿಯರ ಬೇಡಿಕೆ ಕೇಳಿ ಸಚಿವ ಸಂತೋಷ ಲಾಡ್ ಸುಸ್ತಾಗಿದ್ದಾರೆ.

ಮದ್ಯಪಾನ ಪ್ರಿಯರ ವಿಚಿತ್ರ ಹೋರಾಟ ಕಂಡು ಶಾಕ್ ಆಗಿದ್ದಾರೆ. ಸರ್ಕಾರದ ಪರವಾಗಿ ಪ್ರತಿಭಟನಾಕಾರರ ಮನವಿ ಸ್ವೀಕಾರ ಮಾಡಲು ಬಂದಿದ್ದ ಲಾಡ್ ಮುಂದೆ ರಾಜ್ಯ ಕುಡುಕ–ರಿಗೆ ಆಗುತ್ತಿರುವ ಅನ್ಯಾಯ ಬಗ್ಗೆ ಅಳಲು ತೋಡಿಕೊಂಡಿದ್ದಾರೆ. ಅಲ್ಲದೇ ಡಿಸೆಂಬರ್ 31 ರಂದು ಮದ್ಯಪಾನ ಪ್ರಿಯರ ದಿನವನ್ನಾಗಿ ಆಚರಣೆ ಮಾಡಬೇಕು. ಅಂದು ಎಲ್ಲಾ ರೀತಿಯ ಬಾರ್, ರೆಸ್ಟೋರೆಂಟ್ ನಲ್ಲಿ 50 ರಷ್ಟು ರಿಯಾಯಿತಿ ನೀಡಬೇಕು, ಕುಡುಕ ಎಂಬ ಪದಬಳಕೆ ನಿಷೇಧ ಮಾಡಬೇಕು.

ಮದ್ಯಪಾನ ಪ್ರಿಯರ ಅಭಿವೃದ್ಧಿ ನಿಗಮ ಆರಂಭಿಸಿ ಹತ್ತರಷ್ಟು ಅನುದಾನ ನೀಡಬೇಕು. ಪ್ರತಿ ಬಾಟಲ್ ಗೆ ಇನ್ಸೂರೆನ್ಸ್ ಮಾಡಬೇಕು ಪ್ರತಿ ಬಾರ್ ಮುಂದೆ ಆಂಬುಲೆನ್ಸ್ ಸೇವೆ ನೀಡಬೇಕು, ಬಾರ್ ಪಕ್ಕದಲ್ಲಿ ಕುಡುಕರ ವಿಶ್ರಾಂತಿಗಾಗಿ ಭವನ ನಿರ್ಮಾಣ ಬೇಕೆಂದ ಮದ್ಯಪಾನ ಪ್ರಿಯರು ಆಗ್ರಹಿಸಿದ್ದಾರೆ.

# ಬಣ್ಣ ಮತ್ತು ಆರೋಗ್ಯ

## ಭಾವರಶ್ಮಿ



– ವಾಣಿಶ್ರೀ, ಮೈಸೂರು.
("ನಮ್ಮ ಕಥಾ ಅರಮನೆ" ಬರಹಗಾರರು)

ಉದಯರಶ್ಮಿ ದಿನಪತ್ರಿಕೆ

ಇಂದು ಆರೋಗ್ಯವಂತರನ್ನು ಕಾಣುವುದು ದುಸ್ತರವಾಗಿದೆ. ಪ್ರತಿಯೊಬ್ಬರಿಗೂ ಒಂದಲ್ಲ ಒಂದು ಕಾಯಿಲೆ ಭಾದಿಸುತ್ತಿದೆ.. ಇದಕ್ಕೆ ಮುಖ್ಯ ಕಾರಣ ಆಧುನಿಕ ಜೀವನ ಶೈಲಿ.

ಇಂದಿನ ಜೀವನ ಬಣ್ಣದ ಬದುಕಿನಿಂದ ಕೂಡಿದೆ....ಬಹಳ ಜನರು ಬಾಯಿಯಲ್ಲಿ ಮಾತ್ರ ಸರಳ ಜೀವನದ ಬಗ್ಗೆ ಹೇಳುತ್ತಾ, ಬಣ್ಣಕ್ಕೆ ಮಾರು ಹೋಗುವುದು ಇಂದಿನ ಜೀವನದಲ್ಲಿ ಸರ್ವೇಸಾಮಾನ್ಯ.

ಈ ಬಣ್ಣ ನಿಧಾನವಾಗಿ, ವಿಷ ರೂಪದಲ್ಲಿ ನಮ್ಮ ದೇಹವನ್ನು ಸೇರುತ್ತಿರುವುದು ವಿಪರ್ಯಾಸವೇ ಸರಿ.

ಮಹಿಳೆಯರ ಸೌಂದರ್ಯ ವರ್ಧಕಗಳಾದ ಬಣ್ಣ ಬಣ್ಣದ ಲಿಪ್ಸ್ಟಿಕ್ (ತುಟಿ ಕೆಂದುಟಿಯಾಗಲು), ಉಗುರು ಬಣ್ಣಗಳು, ಗಂಡು ಹೆಣ್ಣು ಅನ್ನದೆ ನರೆಗೂದಲು ಮುಚ್ಚಿ ಚಿರ ಯೌವನದವರಂತೆ ಕಾಣಲು ತಲೆಗೆ ರಂಗುರಂಗಿನ ಬಣ್ಣ, ಪಟ್ಟಿ ಮಾಡುತ್ತಾ ಹೋದರೆ ಹನುಮಂತನ ಬಾಲದಂತೆ ಮುಗಿಯದ ಅಧ್ಯಾಯ... ಇದು ಆರೋಗ್ಯಕ್ಕೆ ಹಾನಿಕರ ಎಂದರೂ ಇದು ಕೆಲ ಜನರ ಆಯ್ಕೆ ಅಷ್ಟೇ... ಆದರೆ ನಾನು ಈಗ ಹೇಳ ಹೊರಟಿರುವುದು ಎಲ್ಲಾ ಜನರ ಆರೋಗ್ಯಕ್ಕೆ ಸಾಮೂಹಿಕವಾಗಿ ಮಾರಕವಾದ ತಿನ್ನುವ ತರಕಾರಿಗೆ ಹಾಕುತ್ತಿರುವ ಬಣ್ಣದ ಬಗ್ಗೆ. ಇದಕ್ಕೆ ಇತ್ತೀಚೆಗೆ ನಡೆದ ಘಟನೆ ಬಗ್ಗೆ ನಿಮಗೆ ಹೇಳಲೇಬೇಕು.



ಮೊನ್ನೆ ಸ್ನೇಹಿತರ ಮನೆಯಲ್ಲಿ ಒಂದು ಸಮಾರಂಭ ಇತ್ತು... 150 ರಿಂದ 200 ಜನರ ಊಟ... ಅಲ್ಲಿ ಊಟದ ಉಸ್ತುವಾರಿಯನ್ನು ಅವರ ಪರಿಚಯದವರು ವಹಿಸಿದ್ದರು. ಅಡುಗೆಗೆ ಬೇಕಾದ ತರಕಾರಿ, ಸಾಮಾನು ತಂದು ಕೊಡುವುದು, ಅಡಿಗೆಯ ಮೇಲ್ವಿಚಾರಣೆ ಅವರ ಜವಾಬ್ದಾರಿ. ಆ ದಿನದ ಕಾರ್ಯಕ್ರಮ ಮುಗಿಯಿತು..ಎಲ್ಲಾ ನಿರ್ಗಮನದ ನಂತರ ಆತ್ಮೀಯರಾದ ಕೆಲ ಮಂದಿ ಮಾತ್ರ ಉಳಿದುಕೊಂಡೆವು...ಸಮಾರಂಭಕ್ಕೆ ತಂದ ತರಕಾರಿ ಹೆಚ್ಚಾದ ಕಾರಣ, ಅಲ್ಲಿದ್ದ ಎಲ್ಲರಿಗೂ ಸ್ನೇಹಿತರು ತರಕಾರಿಯನ್ನು ಹಂಚಿದರು... ಹಾಗೆ ಬಟಾಣಿ ಕರ್ರಿ ಮಾಡಲು ತಂದ ಹಸಿ ಬಟಾಣಿಯನ್ನು ಕೊಟ್ಟರು.



ನಾನು ಮರುದಿನ ಬಟಾಣಿಯನ್ನು ಬೇಯಿಸಿ ಅದನ್ನು ಉಪ್ಪಿಟ್ಟು ಮಾಡುವ ಎಂದು ತೊಳೆದು ಬೇಯಿಸಲು ಇಟ್ಟೆ... ನೋಡಿದರೆ ನೀರೆಲ್ಲಾ ಹಸಿರು ಬಣ್ಣ. ನನಗೆ ಒಂದು ಕ್ಷಣ ಶಾಕ್... ಯಾವ ಪಾತ್ರೆಯಲ್ಲಿ ಬೇಯಲು ಇಟ್ಟೆ ಅಂತ.

ಅದು ಹಾಗಲ್ಲ... ಹಸಿ ಬಟಾಣಿ ಎಂದು ಬಿಂಬಿಸಲು, ನೆನೆಸಿದ ಒಣ ಬಟಾಣಿಗೆ ಬಣ್ಣ ಹಾಕಿ ಮಾರಿದ್ದಾರೆ... ಜನರು ಹಸಿರಾಗಿ ಕಂಡ ತಕ್ಷಣ ಕೊಂಡುಕೊಳ್ಳಲಿ ಎಂಬುದು ಅವರ ಉದ್ದೇಶ. ಆದರೆ ಅದು ದೇಹಕ್ಕೆ ಮಾರಕ. ಒಟ್ಟಾಗಿ ಅಡುಗೆ ಮಾಡಿವಾಗ, ಸಭೆ ಸಮಾರಂಭದಲ್ಲಿ ನಮ್ಮಂತೆ ಗಮನಿಸಿ ಬೇಯಿಸುತ್ತಾರೆಯೆ?

ನಾನು ಕಂಡಂತೆ ಕೆಂಪಾಗಿ ಕಾಣಲು ಕ್ಯಾರೆಟ್ ಗೆ, ಮೂಲಂಗಿಗೆ ಬಿಳಿಯಾಗಿ ಕಾಣಲು ರಾಸಾಯನಿಕ ದ್ರಾವಣದಲ್ಲಿ ಅದ್ದಿ ತೆಗೆಯುತ್ತಾರೆ. ಇದು ಮನೆಗೆ ತಂದ ಒಂದೆರಡು ದಿನದಲ್ಲಿ ಕೆಟ್ಟು ಹೋಗುತ್ತದೆ. ಮನೆಯಲ್ಲಿ ಮಾಡಿದ ಅಡುಗೆ ರುಚಿಸದ ಯುವ ಜನತೆ ಫಾಸ್ಟ್ ಫುಡ್ ಗಳತ್ತ ಮುಖ ಮಾಡಿರುವ ಇಂದಿನ ದಿನದಲ್ಲಿ ಇದು ಆತಂಕಕಾರಿ ವಿಷಯವೇ ಹೌದು.


ಎಲ್ಲೆಲ್ಲೂ ತಲೆ ಎತ್ತಿ ನಿಂತಿರುವ ಹೋಟೆಲ್, ರಸ್ತೆ ಬದಿಯ ತಿಂಡಿ ಗಾಡಿಗಳು, ಈ ಬಣ್ಣಗಳ ಬಗ್ಗೆ ತಲೆಕೆಡಿಸಿಕೊಳ್ಳಲು ಸಾಧ್ಯವೇ? ಈ ರೀತಿಯ ಆಹಾರದಿಂದ ಆರೋಗ್ಯವಂತ ಸಮಾಜ, ಅದರಲ್ಲೂ ಯುವ ಸಮೂಹ ಸೃಷ್ಟಿಯಾಗಲು ಸಾಧ್ಯವೇ? ಆದ–ದ್ದರಿಂದ ಆದಷ್ಟು ಈ ಬಣ್ಣವೆಂಬ ಮಾಯಜಾಲದಿಂದ ಹೊರಬನ್ನಿ.. ಇಂತಹ ಕಲಬೆರಕೆ ಆಹಾರ ಕಂಡು ಬಂದರೆ ಪ್ರತಿಭಟಿಸಿ.." ಬಣ್ಣ ಮುಖ್ಯ ಅಲ್ಲ... ಅದರಲ್ಲಿನ ಜೀವ ಸತ್ವ ಮುಖ್ಯ "ಎಂಬುದನ್ನು ಆದಷ್ಟು ಜನರಿಗೆ ಸಾರಿ ಹೇಳಿ, ಮನಮುಟ್ಟುವಂತೆ ತಲುಪಿಸುವ ಕಾರ್ಯ ಮಾಡೋಣ.

ಆರೋಗ್ಯವಂತ ಸಮಾಜದ ಮೂಲಕ ಮಾತ್ರ ಬಲಿಷ್ಠ ರಾಷ್ಟ್ರವನ್ನು ಕಟ್ಟಲು ಸಾಧ್ಯ. ಏನಂತೀರ?

## ಕಾವ್ಯರಶ್ಮಿ

### ಪಯಣ

– ಚಂದ್ರಶೇಖರ್ ಸುಬ್ರಹ್ಮಣ್ಯಂ.
("ನಮ್ಮ ಕಥಾ ಅರಮನೆ" ಬರಹಗಾರರು)



ಜೀವನವೆನಿಸಿದರೆ ಒಂದು ಪಯಣದಂತೆ
ಜೀವ ಸೇರುವ ಕೊನೆ ತಾಣ ನಿಲ್ದಾಣದಂತೆ
ದಾರಿ ಮದ್ಯೆಯೇ ಇಳಿದು ಹೋಗುವವರೆಷ್ಟೋ
ದಾಟಿ ನಮ್ಮನ್ನು ಮುಂದೆ ಸಾಗುವವರೆಷ್ಟೋ

ಜಾಗ ನನ್ನದೆನ್ನುವುದು ಶುದ್ಧ ಮೂರ್ಖತನ
ಬೇಗನೇ ಹೋಗಿ ಸೇರಿದರೆ ಎಲ್ಲಿದೆ ಒಡೆತನ
ವಿದಿಯಾಟವೆಂಬುದೇ ಪಡೆಯುವ ಟಿಕೆಟ್ಟು
ಪಯಣಿಸು ನೀ ಅಳವಡಿಸಿ ಕೆಲವು ನುಡಿಕಟ್ಟು

ಬಾಳ ಬಂಡಿಯಲ್ಲಿ ಜೊತೆಯಾದವಳು ಒಡತಿ
ಬಾವಿಸದಿರು ಅವಳನ್ನು ಆಕೆ ಬರಿಯ ಸಂಗಾತಿ
ಕಡಿವಾಣ ಕಳಚಿದಾಗಲೇ ನೀ ಕೆಳಗೆ ಬೀಳುವೆ
ಬಿಡಿಯಾಗಿ ಹೋದಾಗಲೇ ಪಯಣ ಮುಗಿಸುವೆ

ಉದಯರಶ್ಮಿ ದಿನಪತ್ರಿಕೆ



